ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮಾರ್ಚ್-2016
ಬೆಲೆ ರೂ. 1



## ಅಂತಾರಾಷ್ಟ್ರೀಯ ಮಹಿಳಾ ದಿನ

## ಮಹಿಳಾ ಸಮಾನತೆಯ ಹಕ್ಕುಗಳು

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 6
ಮಾರ್ಚ್ 2016, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 9958807225
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟಿಲ್ 9650182413
ಬಾಬುರಾಜ್ ಪೂಜಾರಿ 9818807696
ಎಸ್. ಪರಮೇಶ್ 9015332380
ತ್ಯಾಗೇಶ್ ಮೂರ್ತಿ 9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ

## ನೇರ ಮಾತು

ಭಾರತ ಮತ್ತು ಪಾಕಿಸ್ತಾನಗಳು ನೆರೆರಾಷ್ಟ್ರಗಳಾಗಿದ್ದರೂ ಪರಸ್ಪರ ಉತ್ತಮ ಸಂಬಂಧವನ್ನು ಇಟ್ಟುಕೊಂಡಿಲ್ಲ. ಭಾರತದ ಕಡೆಯಿಂದ ಸಂಬಂಧವನ್ನು ಸರಿಪಡಿಸುವ ಪ್ರಯತ್ನಗಳಾಗುವಂತೆ, ಗಡಿಯಾಚೆಯಿಂದ ಸಂಬಂಧವನ್ನು ಕಡಿಯುವ ಪ್ರಯತ್ನಗಳೂ ನಡೆಯುತ್ತಿರುತ್ತವೆ. ಇಂತಹ ಸಂದರ್ಭದಲ್ಲಿಯೇ ಭಾರತದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ದಿಢೀರೆಂದು ಪಾಕಿಸ್ತಾನ ಭೇಟಿ ಮಾಡಿ ಬಂದರು. ಎರಡು ದೇಶಗಳ ನಡುವೆ ಉತ್ತಮ ಸಂಬಂಧವನ್ನು ಕುದುರಿಸುವಲ್ಲಿ ಈ ಭೇಟಿಯು ಸಹಾಯಕವಾಗುವುದೆಂಬ ಆಕಾಂಕ್ಷೆ ಸರಕಾರ ಮತ್ತು ವಿದೇಶ ವ್ಯವಹಾರ ತಜ್ಞರಲ್ಲಿತ್ತು. ಆದರೆ ಪಾಕಿಸ್ತಾನಕ್ಕೆ ಪ್ರಧಾನಿ ಭೇಟಿಯ ನಂತರ ಪಠಾಣ್‌ಕೋಟ್‌ನಲ್ಲಿ ಭಯೋತ್ಪಾದಕರು ನಡೆಸಿದ ಆಕ್ರಮಣ ಈ ಎರಡೂ ದೇಶಗಳ ನಡುವಿನ ಸಂಬಂಧವನ್ನು ಉತ್ತಮಪಡಿಸುವಲ್ಲಿ ಸಹಾಯಕವಾಗಲಾರದು. ಈ ಎರಡು ರಾಷ್ಟ್ರಗಳ ನಡುವಿನ ಸಂಬಂಧ ಹೇಗಿದ್ದರೂ, ಸಲ್ಮಾನ್ ಖಾನ್‌ನ ಭಜರಂಗಿ ಭಾಯಿಜಾನ್ ಚಿತ್ರದಲ್ಲಿ ತೋರಿಸಿದಂತೆ ಸಾಮಾನ್ಯ ಜನರ ನಡುವೆ ಉತ್ತಮ ಸಂಬಂಧ ಇರಬೇಕೆಂದು ಗಡಿಯ ಎರಡು ಕಡೆಯ ಜನರು ಅಪೇಕ್ಷಿಸುತ್ತಾರೆ.

ಸಾಮಾನ್ಯ ಜನರು ಕೆಲವೊಮ್ಮೆ ಅರಿವಿಲ್ಲದೇ ಎರಡು ದೇಶಗಳ ವೈರತ್ವದ ನಡುವೆ ಸಿಕ್ಕಿಹಾಕಿಕೊಳ್ಳುತ್ತಾರೆ. ಸಮುದ್ರದಲ್ಲಿ ಮೀನು ಹಿಡಿಯುವವರು, ಗಡಿ ಪ್ರದೇಶಗಳಲ್ಲಿ ಕುರಿ, ದನ ಕಾಯುವವರು, ಅಕಸ್ಮಾತ್ ಗಡಿಯಾಚೆ ಹೋಗಿ ಬರಲಾಗದವರು ಇತ್ಯಾದಿ ಬದುಕಿನಲ್ಲಿ ದುರಂತವನ್ನು ಕಾಣುತ್ತಾರೆ. ಇಂತಹದೇ ಒಂದು ಘಟನೆಯಲ್ಲಿ, ಕರ್ನಾಟಕದ ಯುವಕನೊಬ್ಬ ಪಾಕಿಸ್ತಾನದ ಜೈಲಿನಲ್ಲಿ ಇದ್ದಾನೆ ಎಂಬ ವಿಚಾರ ತಿಳಿದು ಬಂದಿದೆ. ಕರ್ನಾಟಕದ ಕುಟುಂಬವೊಂದರ ನೋವಿನ ಬಗೆಯನ್ನು ಅರಿತ ದೆಹಲಿ ಕರ್ನಾಟಕ ಸಂಘವು ಆ ಯುವಕನ ಬಿಡುಗಡೆಗೆ ಪ್ರಯತ್ನ ಮಾಡಲು ಮುಂದಡಿಯಿಟ್ಟಿದೆ. ಈ ನಿಟ್ಟಿನಲ್ಲಿ ಸಂಘದ ಪದಾಧಿಕಾರಿಗಳು ಯುವಕನ ತಂದೆ ತಾಯಿಯವರು ಭಾರತದಲ್ಲಿರುವ ಪಾಕಿಸ್ತಾನದ ರಾಯಭಾರಿ ಶ್ರೀ ಅಬ್ದುಲ್ ಬಾಸಿಟ್ ಅವರನ್ನು ಭೇಟಿಯಾಗಿ ಅವರ ಅಳಲನ್ನು ತೋಡಿಕೊಳ್ಳುವಂತೆ ಮಾಡಿದರು. ನಾವೆಲ್ಲ ಮೊದಲಬಾರಿಗೆ ಪಾಕಿಸ್ತಾನದ ರಾಯಭಾರಿ ಕಚೇರಿಗೆ ಭೇಟಿ ನೀಡಿದುದರಿಂದ ಅಲ್ಲಿರುವ ಪಾಕಿಸ್ತಾನೀ ಅಧಿಕಾರಿಗಳು ಆತ್ಮೀಯತೆಯಿಂದ ಬರಮಾಡಿಕೊಂಡ ರೀತಿ ಮೆಚ್ಚುವಂತಾಗಿತ್ತು. ಕಚೇರಿಯ ಗೇಟ್‌ನಿಂದ ಮೊದಲ್ಗೊಂಡು, ಯುವಕನ ಹೆತ್ತವರ ಅಳಲನ್ನು ಕೇಳುವಲ್ಲಿ ಶ್ರೀ ಬಾಸಿಟ್ ಮತ್ತು ಅಲ್ಲಿನ ಅಧಿಕಾರಿಗಳು ಸಮಚಿತ್ತರಾಗಿ ಮಾನವೀಯ ದೃಷ್ಟಿಯಲ್ಲಿ ನೋಡಿಕೊಂಡರು. ಬೆಳ್ಳಗಿರುವುದೆಲ್ಲಾ ಹಾಲಲ್ಲ ಎಂದು ತಿಳಿದಿದ್ದರೂ, ಹಾಲು ಬೆಳ್ಳಗೆ ಇರುವುದು ಎನ್ನುವುದು ಮಾತ್ರ ಸತ್ಯ.

ಯುವಕನ ಬಿಡುಗಡೆಯ ವಿಚಾರದಲ್ಲಿ ನಮ್ಮ ನಿಯೋಗ ಭೇಟಿಯಾದಾಗ ಕೇಂದ್ರ ಕಾನೂನು ಸಚಿವರಾದ ಶ್ರೀ ಡಿ.ವಿ. ಸದಾನಂದ ಗೌಡರೂ ಅತ್ಯಂತ ಕಳಕಳಿಯಿಂದ ವಿದೇಶಾಂಗ ಸಚಿವಾಲಯದಲ್ಲಿ ಇದರ ಕುರಿತು ಮಾತನಾಡಿ ಬೇಕಾದ ವ್ಯವಸ್ಥೆಯನ್ನು ಮಾಡುವಲ್ಲಿ ಸಹಕಾರ ನೀಡಿದ್ದಾರೆ. ಸಂಘವು ತನ್ನ ಇತಿಮಿತಿಯಲ್ಲಿ ಕರ್ನಾಟಕದ ಜನರ ಇಂತಹ ಸಂಕಷ್ಟಗಳಿಗೆ ಸ್ಪಂದಿಸಲು ಪ್ರಯತ್ನಿಸುತ್ತಿದೆ. ನಮ್ಮ ಪ್ರಯತ್ನಗಳು ಯಶಸ್ವಿಯಾಗಲು ಎಲ್ಲರ ಬೆಂಬಲ ಬೇಕಾಗಿದೆ.

ಪ್ರಿಯ ಸದಸ್ಯರೇ, ದೆಹಲಿಯಲ್ಲಿ ಚಳಿ ಕಡಿಮೆಯಾಗುತ್ತಿದ್ದಂತೆ ನೀವೆಲ್ಲಾ ಹೋಳಿಹಬ್ಬವನ್ನು ಆಚರಿಸಲು ಕಾತುರರಾಗಿರುವಿರಲ್ಲ. ಅಂತೆಯೇ ಇನ್ನು ಕೆಲವೇ ದಿನಗಳಲ್ಲಿ ಹೊಸ ಸಂವತ್ಸರವು ಯುಗಾದಿಯೊಂದಿಗೆ ಆರಂಭವಾಗುವುದು. ನಿಮಗೆಲ್ಲರಿಗೂ ಹೋಳಿ ಹಬ್ಬದ ಮತ್ತು ಯುಗಾದಿಯ ಹಾರ್ದಿಕ ಶುಭಾಶಯಗಳು. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಅಭಿಮತ ರಸಪ್ರಶ್ನೆ

1. ಮಾರನಾಯಕ ನಾಟಕದ ರಚನಾಕಾರರು ಯಾರು ?
2. ಕರ್ನಾಟಕ ನಾಟಕ ಅಕಾಡಮಿಯು ಪ್ರಸ್ತುತಪಡಿಸಿದ ವೃತ್ತಿ ಕಂಪನಿಯ ಎರಡು ನಾಟಕಗಳು ಯಾವುವು?
3. ಕೊಡವ ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮ ಉದ್ಘಾಟಕರು ಯಾರು?
4. ಸಂಘದ ವಾರ್ಷಿಕ ಆಟೋಟ ಸ್ಪರ್ಧೆಗಳು ನಡೆದ ಕ್ರೀಡಾಂಗಣ ಯಾವುದು ?
5. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಎಂದು ಆಚರಿಸಲಾಗುವುದು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.03.2016ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಫೆಬ್ರವರಿ 2016ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ ಸರಿಯಾದ ಉತ್ತರ 1. ಶಶಿಧರ್ ಅಡಪ 2. ಕಬ್ಬಿಗರ ಕಾವ 3. ಭರತ ಮತ್ತು ಬಾಹುಬಲಿ 4. ಶ್ರೀ ಮಂಜುನಾಥ ಬೆಳಕೆರೆ 5. ಮೀರಟ್

**ಸರಿಯಾದ ಉತ್ತರ ಕಳುಹಿಸಿದವರು.**
1 ಶ್ರೀಮತಿ ಶಾರದಾ ಮಲ್ಲನಗೌಡ ಎಸ್ 2. ಶ್ರೀಮತಿ ಪ್ರೇಮಲತಾ 3. ಶ್ರೀಮತಿ ನಾಗವೇಣಿ ಬಸವರಾಜು 4. ಶ್ರೀಮತಿ ಸೌಮ್ಯ ಕೊಟ್ರೇಶ್ 5. ಶ್ರೀ ಶಿವಕುಮಾರ್ 6. ಶ್ರೀ ಡಿ. ಗೋವಿಂದ ರಾಜ 7. ಶ್ರೀ ಭರತ್‌ಕುಮಾರ್ ಎನ್.ಎಂ.

## ಮುನ್ನೋಟ

ದೆಹಲಿ ಕರ್ನಾಟಕ ಸಂಘ ಕರ್ನಾಟಕದ ಅಕಾಡೆಮಿಗಳ ಜೊತೆ ಸೇರಿ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದ್ದು ಫೆಬ್ರವರಿ 28ರಂದು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮಡಿಕೇರಿ, ಆಯೋಜಿಸಿದ ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ಕಲಾವಿದರು ಕಾರ್ಯಕ್ರಮ ನೀಡಿ ದೆಹಲಿ ಕನ್ನಡಿಗರ ಮೆಚ್ಚುಗೆಯನ್ನು ಪಡೆದಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯವಾಗಿ ತುಂಬಾ ಸಹಕಾರ ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬಿದ್ದಾಟಂಡ ಎಸ್. ತಮ್ಮಯ್ಯ, ಇಲಾಖೆಯವರಾದ ಶ್ರೀ ಎಸ್.ಐ. ಭಾವಿಕಟ್ಟಿ ಮತ್ತು ರಿಜಿಸ್ಟ್ರಾರ್ ಶ್ರೀ ಉಮರಬ್ಬ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಸ್ನೇಹಿತರೇ, ಮಾರ್ಚ್ ತಿಂಗಳಿನಲ್ಲಿ ಸಂಘದ ಸಹಕಾರದೊಂದಿಗೆ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರನಾಡ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿದೆ. ಕನ್ನಡ ಸಂಸ್ಕೃತಿ ಇಲಾಖೆ ಈ ಕಾರ್ಯಕ್ರಮಕ್ಕಾಗಿ 15 ಲಕ್ಷ ರೂಗಳನ್ನು ಬಿಡುಗಡೆ ಮಾಡಿದೆ. ಈ ಕಾರ್ಯಕ್ರಮಕ್ಕೆ ಸಹಾಯ ಮಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರೀ ಹಾಗೂ ಇಲಾಖೆಯ ನಿರ್ದೇಶಕರಾದ ಶ್ರೀ ದಯಾನಂದ ಅವರಿಗೆ ದೆಹಲಿ ಕರ್ನಾಟಕ ಸಂಘದ ಕೃತಜ್ಞತೆಗಳು. ಕಾರ್ಯಕ್ರಮದಲ್ಲಿ ಸುಮಾರು 100ಕ್ಕೂ ಹೆಚ್ಚು ಜನ ಕಲಾವಿದರು ಭಾಗವಹಿಸಲಿದ್ದಾರೆ. ತಪ್ಪದೆ ಕಾರ್ಯಕ್ರಮಕ್ಕೆ ಬನ್ನಿ.

ಈ ಬಾರಿ ಮಹಿಳಾ ದಿನಾಚರಣೆಯನ್ನು ಮಾರ್ಚ್ 27ರಂದು ಹಮ್ಮಿಕೊಳ್ಳಲಾಗಿದೆ. ಸ್ಥಳೀಯ ಕನ್ನಡದ ಮಹಿಳೆಯರಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಬೆಂಗಳೂರಿನ ರಂಗ ಸೌರಭ ತಂಡದಿಂದ ಏಪ್ರಿಲ್ 2ರಂದು ವರಕವಿ ದ.ರಾ ಬೇಂದ್ರೆಯವರ ಬದುಕು ಮತ್ತು ಬರಹಗಳ ಆಧಾರಿತ ನಾಟಕ ಗಂಗಾವತರಣ ಮತ್ತು ಏಪ್ರಿಲ್ 3ರಂದು ಪ್ರೇಮಕವಿ ಕೆ.ಎಸ್. ನರಸಿಂಹ ಸ್ವಾಮಿಯವರ ಕವನಗಳ ಆಧಾರಿತ 'ಮೈಸೂರು ಮಲ್ಲಿಗೆ' ನಾಟಕ ನಡೆಯಲಿದೆ. ಇಲ್ಲಿ ಸುಮಾರು 45ಕ್ಕೂ ಹೆಚ್ಚು ಕಲಾವಿದರು ಅದರಲ್ಲೂ ಕಿರುತೆರೆಯಲ್ಲಿ ನಟಿಸುತ್ತಿರುವ ಕಲಾವಿದರು ಭಾಗವಹಿಸಲಿದ್ದಾರೆ.

ಸ್ಥಳೀಯ ಮಕ್ಕಳಿಗೆ ಮತ್ತು ಮಹಿಳೆಯರಿಗೆ ವಾರ್ಷಿಕೋತ್ಸವದ ಅಂಗವಾಗಿ ನೃತ್ಯ ತರಬೇತಿಯನ್ನು ಕರ್ನಾಟಕದ ಶ್ರೀಮತಿ ಶುಭಾಂಗಿಯವರು ನೀಡಲಿದ್ದಾರೆ. ಏಪ್ರಿಲ್ 2ರಿಂದ 9 ರವರೆಗೆ ತರಬೇತಿ ನಡೆಯಲಿದ್ದು 10ರಂದು ತರಬೇತಿ ಪಡೆದವರಿಂದ ಸಂಘದ ವಾರ್ಷಿಕೋತ್ಸವದಂದು ಕಾರ್ಯಕ್ರಮ ನಡೆಯಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಬೇಕಾಗಿ ವಿನಂತಿ.

ಏಪ್ರಿಲ್ 10 ರಿಂದ 30 ರವರೆಗೆ ರಂಗ ತರಬೇತಿ ನಡೆಯಲಿದೆ. ಕರ್ನಾಟಕ ನಾಟಕ ಅಕಾಡೆಮಿ ಇದನ್ನು ಪ್ರಾಯೋಜಿಸಿ ಶ್ರೀ ವೈ.ಡಿ ಬಾದಾಮಿಯವರನ್ನು ತರಬೇತಿ ನೀಡಲು ಕಳುಹಿಸಿಕೊಡುತ್ತಿದೆ. ತರಬೇತಿ ಪಡೆದ ನಂತರ ಸಂಘದಲ್ಲಿ ಪ್ರದರ್ಶನ ಮತ್ತು ದೆಹಲಿಯಿಂದ ಹೊರಗೆ, ಕರ್ನಾಟಕದಲ್ಲೂ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ದಯವಿಟ್ಟು ಈ ತರಬೇತಿ ಶಿಬಿರದಲ್ಲಿ ಭಾಗವಹಿಸಿ. ಮುಂದೆಯೂ ಕೂಡಾ ಹೆಚ್ಚಿನ ಕಾರ್ಯಕ್ರಮಗಳು ನಡೆಯಲಿದ್ದು ಭಾಗವಹಿಸಿ ಮತ್ತು ತಮ್ಮ ಸಲಹೆಗಳನ್ನು ಸಹ ನೀಡಿ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

### 20 ಮಾರ್ಚ್ 2016 ಭಾನುವಾರ, ಬೆಳಿಗ್ಗೆ 11.00ರಿಂದ

ಫುಡ್ ಫೆಸ್ಟಿವಲ್ (ಆಹಾರ ಮೇಳ) ಬೊಂಬೆ ಕುಣಿತ ಮತ್ತು ತಮಟೆ ವಾದನ

### 27 ಮಾರ್ಚ್ 2016 ಭಾನುವಾರ, ಸಂಜೆ 5.00 ಗಂಟೆಗೆ

**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ**

ಸ್ಥಳೀಯ ಸಂಘ ಸಂಸ್ಥೆಗಳ ಮಹಿಳಾ ಕಲಾವಿದರಿಂದ ನೃತ್ಯರೂಪಕ, ಸ್ಕಿಟ್, ವೃಂದ ಗೀತೆ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳು

### 2 ಮತ್ತು 3 ಏಪ್ರಿಲ್ 2016 ಶನಿವಾರ ಮತ್ತು ಭಾನುವಾರ ಸಂಜೆ 5.00 ಗಂಟೆಗೆ

ರಂಗ ಸೌರಭ, ಬೆಂಗಳೂರು ಕಲಾವಿದರು ಪ್ರಸ್ತುತಪಡಿಸುವ ಶ್ರೀ ರಾಜೇಂದ್ರ ಕಾರಂತ್ ಅವರ 'ಗಂಗಾವತರಣ' ಮತ್ತು 'ಮೈಸೂರು ಮಲ್ಲಿಗೆ' ನಾಟಕಗಳು

### 2 ರಿಂದ 10 ಏಪ್ರಿಲ್ 2016 ನೃತ್ಯ ತರಬೇತಿ

ಏಪ್ರಿಲ್ 2 ರಿಂದ 10 ರವರೆಗೆ ವಾರ್ಷಿಕೋತ್ಸವ ದಿನಾಚರಣೆಯ ಅಂಗವಾಗಿ ಸಂಘದ ಸದಸ್ಯರಿಗೆ ಮತ್ತು ಮಕ್ಕಳಿಗೆ ಗುಲ್ಬರ್ಗದ ಶ್ರೀಮತಿ ಶುಭಾಂಗಿ ತಂಡದಿಂದ ನೃತ್ಯ ತರಬೇತಿ

### 10 ಏಪ್ರಿಲ್ 2016 ಭಾನುವಾರ, ಸಂಜೆ 4.00 ಗಂಟೆಗೆ

ವಾರ್ಷಿಕೋತ್ಸವ ದಿನಾಚರಣೆ ಹಾಗೂ ವಿವಿಧ ಆಟೋಟ ಸ್ಪರ್ಧೆಗಳ ಬಹುಮಾನ, 2015–16ನೇ ಸಾಲಿನ ವಿದ್ಯಾರ್ಥಿ ವೇತನ ವಿತರಣೆ

### 11 ರಿಂದ 30 ಏಪ್ರಿಲ್ 2016 ರಂಗ ತರಬೇತಿ ಶಿಬಿರ

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ಇವರಿಂದ ಸ್ಥಳೀಯ ಕಲಾವಿದರಿಗೆ ರಂಗ ತರಬೇತಿ ಶಿಬಿರ

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ದೆಹಲಿ ಕರ್ನಾಟಕ ಸಂಘ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಾರ್ಚ್ 27ರಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಸಮೂಹ ನೃತ್ಯ : ಜಾನಪದ, ಭರತನಾಟ್ಯ, ಮೋಡರ್ನ್ ಡಾನ್ಸ್, ನೃತ್ಯ ರೂಪಕಗಳು. ವೃಂದ ಗೀತೆ : ಜಾನಪದ, ಭಕ್ತಿಗೀತೆ, ಭಾವಗೀತೆ, ರಂಗಗೀತೆ, ಚಲನಚಿತ್ರಗೀತೆ ಇವುಗಳಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಸಂಘದ ಮಹಿಳಾ ಕಲಾವಿದರು ಸಂಘದಲ್ಲಿ ತಮ್ಮ ತಂಡದ ಹೆಸರನ್ನು ದಿನಾಂಕ ಮಾರ್ಚ್ 21ರ ಒಳಗಾಗಿ ನೊಂದಾಯಿಸಬೇಕಾಗಿ ವಿನಂತಿ. ತಂಡಗಳಿಗೆ ಪ್ರಾತಿನಿಧ್ಯ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಕಾರ್ಯಕ್ರಮದ ಸಂಚಾಲಕರು, ಉಪಾಧ್ಯಕ್ಷರು, ಶ್ರೀಮತಿ ಎಸ್.ಸಿ. ಹೇಮಲತಾ–9971121636

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 011–26104818

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 6
ಮಾರ್ಚ್ 2016

**ಅಭಿಮತ ಪ್ರಧಾನ ಸಂಪಾದಕರು**
ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**
ಸಖಾರಾಮ ಉಪ್ಪೂರು
ಚಂದ್ರಶೇಖರ್ ಎನ್.ಪಿ.
ಎಸ್. ಕುಮಾರ್

ಮುಖಪುಟ ಚಿತ್ರ
ಬಾಲಕೃಷ್ಣ ನಾಯ್ಕ್ ಡಿ.

## ಸಂಪಾದಕೀಯ

# ಬಹು ದೂರದ ಹೋರಾಟ

ನಮ್ಮ ಪರಂಪರೆಯು ಪ್ರಕೃತಿಗೆ ಸ್ತ್ರೀತ್ವದ ರೂಪವನ್ನು ನೀಡಿದೆ. ಜಗತ್ತಿನ ಮೂಲ ಶಕ್ತಿಯೂ ಸ್ತ್ರೀತ್ವದ ರೂಪವೇ ಆಗಿದೆ. ಪ್ರಕೃತಿಯನ್ನು ಆರಾಧಿಸುವ ನಮ್ಮ ಪರಂಪರೆಯು ತಾಯಿಯನ್ನು ದೇವರೆಂದಿದೆ. ಎಲ್ಲಾ ದೈವಿಕಕ್ಕೆ ಮೂಲವು ಆದಿಮಾಯೆ ಎಂದಿದೆ. ನಿಸರ್ಗದ ನಿಯಮದಂತೆ ಪ್ರತಿಯೊಂದು ಜೈವಿಕ ಹುಟ್ಟಿಗೆ ಪ್ರಕೃತಿ ಮತ್ತು ಪುರುಷ ಕಾರಣವಾಗುತ್ತವೆ. ಪುರುಷ ಸಮಾಜವು ಇಂತಹ ಆರಾಧಕ ಶಕ್ತಿಯನ್ನು ಹಿಮ್ಮೆಟ್ಟಿಸಲು ನಿರಂತರ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದೆ. ಭಾರತೀಯ ಪುರಾಣೇತಿಹಾಸಗಳಲ್ಲಿ ಉನ್ನತ ಸಾಧನೆಗಳನ್ನು ಮಾಡಿದಂತಹ ಮಹಾನ್ ಸ್ತ್ರೀಯರ ಕಥಾನಕಗಳೊಂದಿಗೆ ಅವರನ್ನು ನಿರ್ದಿಷ್ಟ ಸೀಮಿತದಲ್ಲಿಡುವಂತಹ ನಿಯಮಗಳನ್ನು ರೂಪಿಸಿದಂತಹ ನಿದರ್ಶನಗಳೂ ನಮಗೆ ಮನುಸ್ಮೃತಿಯಂತಹ ಕೃತಿಗಳಲ್ಲಿ ದೊರೆಯುತ್ತವೆ. ನಾಗರೀಕತೆಯ ಬೆಳವಣಿಗೆಯ ಜತೆಯಲ್ಲಿ ಪುರುಷ ಸಮಾಜವು ಸದೃಢವಾಗಿ, ಮಹಿಳಾ ವರ್ಗದ ಮೇಲೆ ಶೋಷಣೆಯು ಬೆಳೆಯುತ್ತಾ ಬಂತು. ಹೆತ್ತ ತಾಯಿ, ಒಡಹುಟ್ಟಿದ ಸೋದರಿ, ಕೈ ಹಿಡಿದ ಮಡದಿ, ತನಗೆ ಜನಿಸಿದ ಮಗಳು ಯಾರೇ ಇರಲಿ ಪುರುಷ ವರ್ಗವು ಮಹಿಳೆಯ ಆಕಾಂಕ್ಷೆಯ ಕುರಿತು ಚಿಂತಿಸಲಿಲ್ಲ. ಬದಲಾಗಿ ಪುರುಷ ಸಮಾಜವು ತನ್ನದೇ ಏಳಿಗೆ ಮತ್ತು ಪರಾಕಾಷ್ಟೆಯನ್ನು ಇನ್ನಷ್ಟೂ ವಿಸ್ತರಿಸುವತ್ತ ಗಮನಹರಿಸಿತು.

ಆಧುನಿಕ ಜಗತ್ತಿನ ಹೊಸ ರಾಷ್ಟ್ರಗಳು ಕೂಡಾ ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಗಳಂತೆ ನೋಡಿಕೊಂಡವು. ಪ್ರಜಾಪ್ರಭುತ್ವದ ಮಹಾನ್ ಪ್ರತಿಪಾದಕರೆಂದು ಕರೆಸಿಕೊಳ್ಳುವಂಥ ರಾಷ್ಟ್ರಗಳು ಕೂಡಾ ಆರಂಭದಿಂದಲೇ ಮಹಿಳೆಯರಿಗೆ ಮತದಾನದಲ್ಲಿ ಪಾಲುಗೊಳ್ಳುವ ಅವಕಾಶವನ್ನು ನೀಡಲಿಲ್ಲ. ಪ್ರಜಾಪ್ರಭುತ್ವವೆಂದು ಘೋಷಿಸಿಕೊಂಡ ರಾಷ್ಟ್ರದ ನಾಯಕರನ್ನು ಆರಿಸುವ ತಮ್ಮ ಅಧಿಕಾರವನ್ನು ಪಡೆಯಲು ಶತಮಾನಗಳಷ್ಟು ಕಾಲ ಮಹಿಳೆಯರು ಹೋರಾಟ ಮಾಡಬೇಕಾಯಿತು. ಉದಾಹರಣೆಗೆ ಅಮೇರಿಕಾದಲ್ಲಿ 1868ರಲ್ಲಿ ಮತದಾನ ನೀಡಿ ನಾಯಕನನ್ನು ಆರಿಸುವ ಪ್ರಕ್ರಿಯೆಯು ಆರಂಭಗೊಂಡರೂ ಮಹಿಳೆಯರಿಗೆ ಈ ಅಧಿಕಾರವು 1920ರಲ್ಲಷ್ಟೇ ದೊರೆಯಿತು. ದುರಾದೃಷ್ಟವೆಂದರೆ ಅಮೇರಿಕಾದಂತಹ ಅಭಿವೃದ್ಧಿಹೊಂದಿದ ಆಧುನಿಕ ರಾಷ್ಟ್ರದ ಅಧ್ಯಕ್ಷಸ್ಥಾನವನ್ನು ಓರ್ವ ಮಹಿಳೆಯು ಇದುವರೆಗೆ ಪಡೆಯಲಾಗಿಲ್ಲ!

ಭಾರತದ ಸಂವಿಧಾನವನ್ನು ರಚಿಸಿದ ಡಾ. ಬಿ.ಆರ್. ಅಂಬೇಡ್ಕರ್ ಅವರು 1950ರಲ್ಲಿ ಅದರ ಅನುಷ್ಠಾನಗೊಳ್ಳುತ್ತಿರುವಾಗಲೇ ಸಾರ್ವತ್ರಿಕ ಮತದಾನದ ಹಕ್ಕನ್ನು ಮಹಿಳೆಯರಿಗೂ ನೀಡುವಂತೆ ನೋಡಿಕೊಂಡರು. ನಮ್ಮ ದೇಶದ ಸಂವಿಧಾನದ ಘನತೆಯೇನೋ ಎಂಬಂತೆ ದೇಶದ ಪ್ರಧಾನಿ ಮಾತ್ರವಲ್ಲ, ರಾಷ್ಟ್ರಪತಿ ಸ್ಥಾನವನ್ನೂ ಮಹಿಳೆಯರು ಅಲಂಕರಿಸಿದ್ದಾರೆ. ಜತೆಗೆ ಬಹಳಷ್ಟು ರಾಜ್ಯಗಳ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದವರಲ್ಲಿ ಮಹಿಳೆಯರ ಸಂಖ್ಯೆಯೇನೂ ಕಡಿಮೆಯಲ್ಲ. ಆದರೆ ಶಾಸನಸಭೆಗಳು ಸೇರಿದಂತೆ ಚುನಾಯಿತ ಸಂಸ್ಥೆಗಳಲ್ಲಿ ಮಹಿಳೆಯರಿಗೆ 33 ಶೇಕಡಾ ಮೀಸಲಾತಿಯನ್ನಾದರೂ ನೀಡಿ ಅವರನ್ನು ಮುಖ್ಯವಾಹಿನಿಗೆ ತರುವಲ್ಲಿ ಇಂದು ಕೂಡಾ ಅಧಿಕಾರವನ್ನು ನಡೆಸುವವರು ಯಾವುದೇ ಕ್ರಮ ಕೈಗೊಳ್ಳದಿರುವುದು ಮಹಿಳೆಯರ ಸಮಾನತೆಗೆ ನಡೆಯುವ ಹೋರಾಟ ಮುಂದುವರಿಯಲು ಕಾರಣವಾಗುತ್ತಿದೆ.

ಮಹಿಳೆಯರು ಇಂದು ಲೈಂಗಿಕ ದೌರ್ಜನ್ಯ ಮತ್ತು ಹಿಂಸಾಚಾರಗಳ ನಡುವೆಯೂ ಆಧುನಿಕ ತಂತ್ರಜ್ಞಾನ ಹಾಗೂ ಸವಲತ್ತುಗಳಿಂದಾಗಿ ಸುದೃಢ ಬದುಕನ್ನು ಬಾಳುತ್ತಿದ್ದರೂ, ಪುರುಷ ಸಮಾಜದ ಅವಗಣನೆಗೆ ಒಳಗೊಂಡಿದ್ದಾರೆ. ನಗರದ ಮಹಿಳೆಯರು ಸಮಾನ ಹಕ್ಕುಗಳೊಂದಿಗೆ ಪುರುಷರಿಗೆ ಸಾಟಿಯಾಗಿ ಸಮಾಜದಲ್ಲಿ ಗೌರವವನ್ನು ಪಡೆಯುತ್ತಿದ್ದರೂ ಹಿಂದುಳಿದ ಗ್ರಾಮೀಣ ಮತ್ತು ಆದಿವಾಸಿ ಬುಡಗಟ್ಟು ಪ್ರದೇಶಗಳ ಮಹಿಳೆಯರ ಮೂಲಭೂತ ಹಕ್ಕುಗಳಿಗೆ ಅವರು ಹೋರಾಟ ಮಾಡಲೂ ಅಶಕ್ತರಾಗಿದ್ದಾರೆ. ಶಿಕ್ಷಣ ಮತ್ತು ಮಹಿಳಾ ಸಬಲೀಕರಣದ ಪ್ರಕ್ರಿಯೆಗಳು ಇಂತಹ ಮಹಿಳೆಯರ ಬದುಕಿನ ಆದ್ಯತೆಯಾಗಬೇಕು. ಮಾರ್ಚ್ ಎಂಟರಂದು ನಾವು ಆಚರಿಸುವ ಅಂತಾರಾಷ್ಟ್ರೀಯ ಮಹಿಳಾ ದಿನವು ಕೇವಲ ಡಂಬಾಚಾರದ ಉತ್ಸವವಾಗದೇ, ಸಮಾಜದಲ್ಲಿ ಮಹಿಳೆಯರು ಸಾಧಿಸಬೇಕಾದಂತಹ ಗಂಭೀರ ವಿಷಯಗಳ ಕುರಿತು ಚಿಂತನೆ ಮತ್ತು ನಿರ್ದಿಷ್ಟ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ದಿನವಾಗಬೇಕು. ದೆಹಲಿ ಕರ್ನಾಟಕ ಸಂಘವು ಕೂಡಾ ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಆಶಾದಾಯಕವಾಗಿದೆ.

*ಬಾಲಕೃಷ್ಣ ನಾಯ್ಕ್ ಡಿ.*

# ದೆಹಲಿಯಲ್ಲಿ ಕೊಡವ ಸಾಹಿತ್ಯ- ಸಂಸ್ಕೃತಿಯ ಮೆರುಗು



ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ, ದೆಹಲಿ ಕರ್ನಾಟಕ ಸಂಘ ಮತ್ತು ಕೊಡವ ಸಮಾಜ ನವದೆಹಲಿ ಇವರ ಸಂಯುಕ್ತಾಶ್ರಯದಲ್ಲಿ ಇದೇ ಫೆಬ್ರವರಿ 28ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 'ಕೊಡವ ಸಾಹಿತ್ಯ-ಸಂಸ್ಕೃತಿಯ ಮೆರುಗು' ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಈ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ದೆಹಲಿಯ ಉಪ ಪೋಲಿಸ್ ಆಯುಕ್ತ ಶ್ರೀ ಬಿ.ಎಲ್. ಸುರೇಶ್ ಅವರು ಮಾತನಾಡಿ, ಹಲವು ವೀರರನ್ನು ಕೊಡವರು ರಾಷ್ಟ್ರಕ್ಕಾಗಿ ನೀಡಿದ್ದಾರೆ. ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಜನರಲ್ ತಿಮ್ಮಯ್ಯರಂತಹ ವೀರ ಸೇನಾನಿಗಳನ್ನು, ಅಂತರರಾಷ್ಟ್ರೀಯ ಆಟಗಾರರನ್ನು ನೀಡಿದ್ದಾರೆ. ಇದರಿಂದಾಗಿ ರಾಜ್ಯಕ್ಕೆ ಮಾತ್ರವಲ್ಲದೆ ದೇಶಕ್ಕೂ ಉತ್ತಮ ಹೆಸರು ಬಂದಿದೆ ಎಂದು ಅಭಿಪ್ರಾಯಪಟ್ಟರು.

ಈ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬಿದ್ದಾಟಂಡ ಎಸ್. ತಮ್ಮಯ್ಯ ಅವರು ವಹಿಸಿದ್ದರು. ಕೊಡವರಿಗೆ ರಾಜ್ಯಸಭೆಯಲ್ಲಿ ಪ್ರಾತಿನಿಧ್ಯ ನೀಡುವಂತೆ ಅವರು ಒತ್ತಾಯಿಸಿದರು. ಕೊಡಗಿನಲ್ಲಿ ಪ್ರತ್ಯೇಕತೆಯ ಕೂಗು ಏಳಲು ಸಂಬಂಧಿಸಿದವರ ಜಿಲ್ಲೆಯ ಬಗೆಗಿನ ನಿರ್ಲಕ್ಷ್ಯವೇ ಕಾರಣ. ನಾವು ಕೊಡಗಿಗೆ ಅಸಾಧ್ಯವಾದುದನ್ನು ಕೇಳುತ್ತಿಲ್ಲ. ರಸ್ತೆ, ನೀರು, ವಿದ್ಯುತ್ತನ್ನು ಸಮರ್ಪಕವಾಗಿ ನೀಡಲು ಸಾಧ್ಯವಾಗಿಲ್ಲ. ಸಾಕಷ್ಟು ವರ್ಷಗಳಿಂದ ಕೇಳುತ್ತಿದ್ದರೂ ಕೊಡಗಿನ ಬಗ್ಗೆ ದಿವ್ಯ ನಿರ್ಲಕ್ಷ್ಯ ಕಂಡು ಬಂದಿದೆ. ಕೊಡಗನ್ನು ಕಾಶ್ಮೀರ, ಕೊಡಗಿನ ಜನರನ್ನು ವೀರರು, ಶೂರರು ಎಂದು ವೇದಿಕೆಯಲ್ಲಿ ಹೊಗಳುತ್ತಾರೆ ನಂತರ ಮರೆತುಬಿಡುತ್ತಾರೆ. ಈ ಹಿನ್ನೆಲೆಯಲ್ಲಿ ಕೊಡಗು ಪ್ರತ್ಯೇಕತೆಯ ಕೂಗು ಕೇಳಿ ಬಂದಿತ್ತು ಎಂದು ಅಭಿಪ್ರಾಯಪಟ್ಟರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತಾ ಕೊಡವರಿಗೆ ರಾಜ್ಯ ಸಭೆಯಲ್ಲಿ ಪ್ರಾತಿನಿಧ್ಯ ನೀಡುವ ಬೇಡಿಕೆ ಅರ್ಥಪೂರ್ಣವಾಗಿದೆ. ಆದರೆ ಕೇವಲ ಬೇಡಿಕೆ ಮಂಡಿಸಿದಲ್ಲಿ ಅದು ಈಡೇರುವುದಿಲ್ಲ. ಇದಕ್ಕೆ ಸೂಕ್ತ ಮಾರ್ಗದಲ್ಲಿ ಹೋಗಬೇಕಾಗಿದೆ. ಕೇಂದ್ರ ಸರ್ಕಾರದ ಅಧಿಕಾರಿಗಳ, ಕಾನೂನು ತಜ್ಞರ ಗಮನ ಸೆಳೆಯಲು ಪರಿಪೂರ್ಣವಾದ ತಜ್ಞರ ಸಮಿತಿಯೊಂದರ ಅಗತ್ಯವಿದೆ. ಕೊಡಗಿನಲ್ಲಿರುವ ನಾನಾ ಕ್ಷೇತ್ರದ ತಜ್ಞರನ್ನು ಒಳಗೊಂಡಿರುವ 10ಜನರನ್ನು ಮೀರದಂತೆ ಸಮಿತಿಯೊಂದನ್ನು ರಚಿಸಿ ಅದಕ್ಕೆ ಬೇಕಿರುವ ವೇದಿಕೆ, ನೆರವನ್ನು ದೆಹಲಿ ಕರ್ನಾಟಕ ಸಂಘವು ನೀಡುವುದು ಎಂಬ ಭರವಸೆಯನ್ನು ನೀಡಿದರು. ಕೆಲವು ವರ್ಷಗಳ ಹಿಂದೆ ದಕ್ಷಿಣ ಕೊಡಗಿನಲ್ಲಿ ನಾಪತ್ತೆಯಾಗಿದ್ದು, ಇದೀಗ ಪಾಕಿಸ್ತಾನದ ಜೈಲಿನಲ್ಲಿದ್ದಾನೆ ಎನ್ನಲಾದ ಯುವಕನನ್ನು ಪತ್ತೆ ಹಚ್ಚಲು ದೆಹಲಿ ಕರ್ನಾಟಕ ಸಂಘವು ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದೆ ಎಂದು ನುಡಿದರು.

ಕರ್ನಾಟಕದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾಗಿರುವ ಶ್ರೀ ಬ್ರಿಜೇಶ್ ಕಾಳಪ್ಪ ಅವರು ಮಾತನಾಡಿ ಹಲವು ವಿಶೇಷತೆಯನ್ನು ಕೊಡವರು ಹೊಂದಿದ್ದಾರೆ. ಹಲವು ಪ್ರದೇಶಗಳಲ್ಲಿ ಮದುವೆಗೆ ವರದಕ್ಷಿಣೆ ಪಡೆಯುವ ಪಿಡುಗು ಇಂದೂ ಇದೆ. ಆದರೆ ತಲತಲಾಂತರದಿಂದಲೂ ವರದಕ್ಷಿಣೆಯ ಕಲ್ಪನೆಯೇ ಕೊಡವರಲ್ಲಿ ಇಲ್ಲ ಎಂದು ಶ್ಲಾಘಿಸಿದರು.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಶ್ರೀಮತಿ ಶಾಂತೆಯಂಡ ವೀಣಾ ಅಚ್ಚಯ್ಯ ಅವರು ಮಾತನಾಡಿ ಕೊಡವ ತಮ್ಮ ಸಂಸ್ಕೃತಿ, ಭಾಷೆಯ ಮೇಲಿನ ಅಭಿಮಾನ ಕಳೆದುಕೊಳ್ಳಬಾರದು. ತಮ್ಮ ವಿಶಿಷ್ಟತೆ ಕಾಪಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಕೊಡವ ಭಾಷೆಯನ್ನು ಎಲ್ಲೆಡೆ ಪಸರಿಸಲು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದರು.

ಹಿರಿಯ ಸಾಹಿತಿ ಹಾಗೂ ಸಂಶೋಧಕರಾದ ನಡಿಕೇರಿಯಂಡ ನಂಜಮ್ಮ ಚಿಣ್ಣಪ್ಪ ಮಾತನಾಡಿ, ಪುಟ್ಟ ಜಿಲ್ಲೆಯ ಪುಟ್ಟ ಜನಾಂಗ ತಮ್ಮ ಸಂಸ್ಕೃತಿ, ಭಾಷೆಯನ್ನು ಸಾವಿರಾರು ವರ್ಷಗಳ ಹಿಂದಿನಿಂದಲೂ ಇನ್ನೂ ಮುಂದುವರಿಸಿಕೊಂಡು ಬರುತ್ತಿರುವುದು ವಿಶೇಷತೆಯಾಗಿದೆ. ಲಿಪಿ ಇಲ್ಲದ ಭಾಷೆಯಲ್ಲಿ ಸಾಕಷ್ಟು ಸಾಹಿತ್ಯ ಸೃಷ್ಟಿಯಾಗಿದೆ ಎಂದು ಹೆಮ್ಮೆಪಟ್ಟರು.



ಮೈಸೂರು ರಂಗಾಯಣದ ನಿರ್ದೇಶಕರಾದ ಶ್ರೀ ಎಸ್.ಐ. ಭಾವೀಕಟ್ಟಿ ಅವರು ಮಾತನಾಡಿ, ಕೊಡವರ ಯುವ ಜನಾಂಗ ಕೂಡಾ ತಮ್ಮ ಸಂಸ್ಕೃತಿಯನ್ನು ಮುಂದುವರಿಸಿ, ಬೆಳೆಸಿಕೊಂಡು ಹೋಗಬೇಕು. ಕೊಡವರ ಬದುಕು ಹಲವರಿಗೆ ಮಾದರಿಯಾಗಿದೆ ಎಂದು ಹೇಳಿದರು.

ಶಿಸ್ತಿಗೆ ಮತ್ತೊಂದು ಹೆಸರೇ ಕೊಡವರು ಎಂದು ನ್ಯಾಯಾಧೀಶರಾದ ಶ್ರೀ ಎ.ಎಸ್. ಜಯಚಂದ್ರ ಪ್ರಶಂಸೆ ವ್ಯಕ್ತಪಡಿಸಿದರು. ಕೊಡವ ಸಾಹಿತ್ಯ ಹಾಗೂ ಸಾಂಸ್ಕೃತಿಕ ಮೆರುಗು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಇವರು ಕೊಡಗಿನ ಮಂದಿ ವಿಶೇಷವಾದ ಚುರುಕು ಬುದ್ಧಿ ಹಾಗೂ ವ್ಯಕ್ತಿತ್ವದವರು. ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಹಾಗೂ ತಿಮ್ಮಯ್ಯ ಅವರಂತಹ ಮಹಾನ್ ನಾಯಕರನ್ನು ನೀಡಿದ ಮಂದಿ ಅಲ್ಲದೆ ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ನಿರ್ಭೀತಿಯಿಂದ ವ್ಯಕ್ತಪಡಿಸುತ್ತಾರೆ. ಈ ಜನಾಂಗ ದೇಶಕ್ಕೆ ಮಹಾನ್ ಕೊಡುಗೆ ನೀಡಿದೆ. ಪರಿಣಾಮ ಭಾರತೀಯರೆಲ್ಲರೂ ತಲೆಬಾಗಿ ಈ ಪುಟ್ಟ ಜಿಲ್ಲೆಗೆ ಗೌರವ ಸಲ್ಲಿಸುತ್ತಾರೆ ಎಂದು ಹೇಳಿದರು.

ನವದೆಹಲಿ ಕೊಡವ ಸಮಾಜದ ಅಧ್ಯಕ್ಷ ಶ್ರೀ ಮಾಚಿಮಂಡ ಕಾರ್ಯಪ್ಪ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಅತಿಥಿಗಳನ್ನು ಸ್ವಾಗತಿಸಿದರು. ಕೊಡವ ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಶ್ರೀ ಬೆಳ್ಳಿಯಪ್ಪ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಉಪಸಮಿತಿಯ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ವಂದನಾರ್ಪಣೆ ಸಲ್ಲಿಸಿದರು. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿಯ ರಿಜಿಸ್ಟ್ರಾರ್, ಶ್ರೀ ಉಮರಬ್ಬ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮದ ಆರಂಭದಲ್ಲಿ ಕೊಡಗು ಸಂಸ್ಕೃತಿ ಕಲೆಯನ್ನು ಪ್ರತಿಬಿಂಬಿಸುವಂತಹ ಕಲಾ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಸಭಾ ಕಾರ್ಯಕ್ರಮದ ನಂತರ ಕವನ ವಾಚನ ಹಾಗೂ ವಿಚಾರಗೋಷ್ಠಿ ಮತ್ತು ಕೊಡಗಿನ ಕಲೆ, ಸಂಸ್ಕೃತಿ, ಸಾಹಿತ್ಯ, ಸಂಗೀತವನ್ನು ಪ್ರತಿಬಿಂಬಿಸುವಂತಹ ಒಂದು ಪರಿಣಾಮಕಾರಿಯಾದ ವಿವಿಧ ಮನೋರಂಜನಾ ಕಾರ್ಯಕ್ರಮವನ್ನು ಕೊಡಗಿನ ಕಲಾವಿದರು ನೆರೆದಿದ್ದ ಜನರಿಗೆ ಮೆಚ್ಚುಗೆಯಾಗುವಂತೆ ನಡೆಸಿಕೊಟ್ಟರು. ಅತಿಥಿ ಕಲಾವಿದರೊಡನೆ ಸ್ಥಳೀಯ ಕಲಾವಿದರು ಸೇರಿ ಹಾಡಿ ಕುಣಿದದ್ದು ಈ ಕಾರ್ಯಕ್ರಮದ ಒಂದು ವಿಶೇಷತೆಯಾಗಿತ್ತು. ಅ

***ಅಭಿಮತ ವರದಿ***

# ಕರ್ನಾಟಕ ನಾಟಕ ಅಕಾಡೆಮಿಯಿಂದ

# ದೆಹಲಿಯಲ್ಲಿ ವೃತ್ತಿ ಕಂಪನಿ ನಾಟಕಗಳು

ಕರ್ನಾಟಕ ನಾಟಕ ಅಕಾಡೆಮಿಯು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ನವದೆಹಲಿಯಲ್ಲಿ ಎರಡು ದಿನಗಳ ವೃತ್ತಿ ಕಂಪನಿ ನಾಟಕೋತ್ಸವವನ್ನು ಇದೇ ಫೆಬ್ರವರಿ 6 ಮತ್ತು 7ರಂದು ಹಮ್ಮಿಕೊಂಡಿತ್ತು.

ಕಾರ್ಯಕ್ರಮವನ್ನು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎಲ್.ಬಿ. ಶೇಕ್ ಮಾಸ್ತರ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ತಮ್ಮ ಸುಶ್ರಾವ್ಯವಾದ ಕಂಠಶ್ರೀಯಿಂದ ರಂಗಗೀತೆಯನ್ನು ಹಾಡುವುದರ ಮೂಲಕ ನೆರೆದಿದ್ದ ಜನರನ್ನು ವೃತ್ತಿರಂಗ ಪ್ರಪಂಚಕ್ಕೆ ಕೊಂಡೊಯ್ದರು. ಕರ್ನಾಟಕ ಸಂಘಕ್ಕೆ ಎರಡು ಮೂರು ಒಳ್ಳೆಯ ವೃತ್ತಿರಂಗಕ್ಕೆ ಸಂಬಂಧಿಸಿದ ಪರದೆಗಳನ್ನು ನೀಡುವುದಾಗಿಯೂ ಮತ್ತು ದೆಹಲಿಯ ಸ್ಥಳೀಯ ಕಲಾವಿದರಿಗೆ ರಂಗ ತರಬೇತಿಯನ್ನು ನೀಡುವುದಾಗಿಯೂ ಇದೇ ಸಂದರ್ಭದಲ್ಲಿ ತಿಳಿಸಿದರು. ಉದ್ಘಾಟನಾ ಸಮಾರಂಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಮುಖ್ಯ ಅತಿಥಿಗಳಾದ ಶ್ರೀ ಬಿ.ಎಸ್. ಪಾಟೀಲ್, ಹಿರಿಯ ರಂಗಕರ್ಮಿ, ನಾಟಕ ಅಕಾಡೆಮಿ ಸದಸ್ಯರಾದ ಶ್ರೀ ಬಿ.ಎಂ. ರಾಮಚಂದ್ರ, ಶ್ರೀ ಜಗುಚಂದ್ರ, ನಾಟಕ ಅಕಾಡೆಮಿಯ ಸಂಚಾಲಕ ಶ್ರೀ ಉಮೇಶ್ ಎಂ. ಸಾಲಿಯಾನ್, ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಉಪಸ್ಥಿತರಿದ್ದರು.



ಉದ್ಘಾಟನಾ ಕಾರ್ಯಕ್ರಮದ ದಿನದಂದು ರಂಗ ಸೇವಾ ಕಲಾಸಂಘ, ವಿಜಯಪುರ ಇವರಿಂದ ಸತ್ಯ ಹರಿಶ್ಚಂದ್ರ ನಾಟಕ ನಡೆಯಿತು. ಈ ನಾಟಕ ಅತ್ಯಂತ ಚೆನ್ನಾಗಿ ಮೂಡಿ ಬಂದು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಈ ನಾಟಕದಲ್ಲಿ ಪುರುಷ ಪಾತ್ರಗಳು ಸೇರಿದಂತೆ ಎಲ್ಲಾ ಪಾತ್ರಗಳಲ್ಲೂ ಮಹಿಳೆಯರೇ ಅಭಿನಯಿಸಿದ್ದರು. ಇಪ್ಪತ್ತರಿಂದ ನಲ್ವತ್ತು ವರ್ಷಗಳ ಕಾಲ ವೃತ್ತಿ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿರುವ ಮಹಿಳೆಯರು ಈ ನಾಟಕವನ್ನು ಅದ್ಭುತವಾಗಿ ಪ್ರಸ್ತುತ ಪಡಿಸಿದರು. ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಜನಪ್ರಿಯವಾಗಿರುವ ಜಿ.ಜಿ. ಹೆಗಡೆ ಅವರು ಬರೆದಿರುವ ಸತ್ಯ ಹರಿಶ್ಚಂದ್ರ ನಾಟಕದ ಪ್ರಯೋಗವು ದೆಹಲಿಯಲ್ಲಿ ನಡೆದುದು ಐತಿಹಾಸಿಕವಾಗಿತ್ತು.

ಎರಡನೇ ದಿನ ನಾಟ್ಯರಾಣಿ ಕಲಾ ಸಂಘ ಇಳಕಲ್ಲ ಅವರು 'ಮಲಮಗಳು' ನಾಟಕವನ್ನು ಪ್ರದರ್ಶಿಸಿದರು.

ಇದೇ ಸಂದರ್ಭದಲ್ಲಿ ನಾಟಕ ಅಕಾಡೆಮಿ ದೆಹಲಿಯ ಹಿರಿಯ ರಂಗಕರ್ಮಿಗಳಾದ ಶ್ರೀ ಭೀಮರಾವ್ ಮುರಗೋಡ್ ಮತ್ತು ಶ್ರೀ ಚೆನ್ನು ಎಸ್. ಮಠದ ಅವರನ್ನು ಸನ್ಮಾನಿಸಿ ಅಭಿನಂದಿಸಿತು. ಶ್ರೀ ಭೀಮರಾವ್ ಮುರಗೋಡ್ ಅವರ ಅನುಪಸ್ಥಿತಿಯಲ್ಲಿ ಅವರ ಧರ್ಮಪತ್ನಿ ಶ್ರೀಮತಿ ಶಾಲನ್ ಮುರಗೋಡ್ ಅವರು ಅಭಿನಂದನೆಯನ್ನು ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ಜನಕಪುರಿ ಕನ್ನಡ ಕೂಟ ಮತ್ತು ಜನಕಪುರಿ ಮಹಿಳಾ ಮಂಡಳಿಯು ಸಹ ಇರ್ವರು ಸನ್ಮಾನಿತರನ್ನು ಗೌರವಿಸಿ ಅಭಿನಂದಿಸಿದರು. ಅ

***ಅಭಿಮತ ವರದಿ***








ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಮಾನವ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯವರೆಗೆ ಓದಿ ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಸನ್‌ನಲ್ಲಿ ಮಾಧ್ಯಮದ ಕೆಲಸಕ್ಕೆ ಸೇರಿದ ಚನ್ನಯ್ಯ ಶಿದ್ರಾಮಯ್ಯ ಮಠದ (ಚೆನ್ನು ಎಸ್. ಮಠದ್) ಭಾರತ ಸರಕಾರದ ಕೃಷಿ ಮಂತ್ರಾಲಯದಲ್ಲಿ ಜಂಟಿ ನಿರ್ದೇಶಕ ಹುದ್ದೆಯಿಂದ ನಿವೃತ್ತಿ ಹೊಂದಿ ದೆಹಲಿಯಲ್ಲಿಯೇ ವಾಸವಾಗಿದ್ದಾರೆ.

ಪ್ರಸಾದನ, ರಂಗಸಜ್ಜಿಕೆ, ವೇಷಭೂಷಣ ಕೆಲವೊಮ್ಮೆ ನಿರ್ದೇಶನದಲ್ಲೂ ತೊಡಗಿಸಿಕೊಂಡಿರುವ ಚೆನ್ನು ಅವರು ಬಾಲ್ಯದಿಂದಲೇ ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ. ಅವರು ಎಂಟನೆಯ ತರಗತಿಯಲ್ಲಿ ಧಾರವಾಡದ ಕಿಟ್ಟೆಲ್ ಕಾಲೇಜು ಆವರಣದಲ್ಲಿ ವೆಂಕಟೇಶ್ ಕುಲಕರ್ಣಿಯವರು ನಡೆಸಿದ ನಾಟಕ ತರಬೇತಿ ಶಿಬಿರಕ್ಕೆ ಸೇರಿ, ಟಿ.ಪಿ. ಕೈಲಾಸಂ ಅವರ "ಪೋಲಿ ಕಿಟ್ಟಿ" ನಾಟಕದಲ್ಲಿ ಮುದುಕನ ಪಾತ್ರ ಮಾಡಿ ಹಾಸನ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ. ಸುಮಾರು ನಾಲ್ಕು ಬಾರಿ ಅವರಿಗೆ ದೆಹಲಿ ಕರ್ನಾಟಕ ಸಂಘದ ನಾಟಕ ಸ್ಪರ್ಧೆಯಲ್ಲಿ ಪ್ರಸಾದನಕ್ಕಾಗಿ ಪ್ರಥಮ ಹಾಗೂ ದ್ವಿತೀಯ ಬಹುಮಾನ ದೊರಕಿವೆ. 'ದೇವರು ಎದ್ದು ಬಂದಾಗ', 'ಕೊಳ್ಳಿ', 'ಸದ್ಗತಿ', 'ಭಗವದ್ಜುಕೀಯಂ', 'ಎಚ್ಚರಿಕೆ', 'ಕಮಲಿ', 'ಅಮ್ಮ', 'ದಾಯೆಗ್ ಇಂಚ ಅಂಡ್', 'ಆವಾ ಬರ್ತಾನ', 'ಬಸ್ರಕೋಡ್ ಬಸ್ಸು', 'ಗೋವಿಂದಾ ನಿ ಗೋವಿಂದಾ  ಗೋವಿಂದ!' ಮೊದಲಾದ ನಾಟಕಗಳಲ್ಲಿ ಅವರು ಭಾಗವಹಿಸಿದ್ದಾರೆ. ನಿವೃತ್ತಿಯ ನಂತರ ಮತ್ತೆ ರಂಗಭೂಮಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಚೆನ್ನು ಅವರು 'ದೀವಾರೆ', "ತುಘಲಕ್", 'ಅಗ್ನಿ – ಭರ್ಖ', ಮೊದಲಾದ ನಾಟಕಗಳಿಗೆ ರಂಗ ಸಜ್ಜಿಕೆ, ವಸ್ತ್ರವಿನ್ಯಾಸ ಮಾಡಿರುವರಲ್ಲದೇ "ಮುಸ್ಕುರಾತೆ ಲಮ್ಹೇ" ಉರ್ದು ಸೀರಿಯಲ್‌ಗೆ ವೇಷ ಭೂಷಣ ಹಾಗು ಪರಿಕರ ನಿರ್ದೇಶಕನಾಗಿ ಕೆಲಸ ಮಾಡಿದ್ದಾರೆ. ಅ

# ಸಂಘದಲ್ಲಿ ಮಾರನಾಯಕ



ಮೈಸೂರಿನ ಸಂಕಲ್ಪ ಕಲಾಸಂಘವು ಕರ್ನಾಟಕ ಕಾರಾಗೃಹ ಇಲಾಖೆಯ ಸಹಯೋಗದೊಂದಿಗೆ ಕನ್ನಡದ ಖ್ಯಾತ ನಾಟಕಕಾರ ಪ್ರೊ. ಎಚ್. ಎಸ್. ಶಿವಪ್ರಕಾಶ್ ಅವರ 'ಮಾರನಾಯಕ' ನಾಟಕವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಫೆಬ್ರವರಿ 14ರಂದು ಪ್ರದರ್ಶಿಸಿತು. ವಿಲಿಯಂ ಷೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ ನಾಟಕವನ್ನು ಆಧರಿಸಿ ಬರೆದ 'ಮಾರನಾಯಕ'ವನ್ನು ಹುಲುಗಪ್ಪ ಕಟ್ಟೀಮನಿ ಅವರು ನಿರ್ದೇಶಿಸಿದ್ದಾರೆ.

ಈ ಸಂದರ್ಭದಲ್ಲಿ ಪ್ರೊ. ಶಿವಪ್ರಕಾಶ್, ಹೆಗ್ಗೋಡಿನ ನೀನಾಸಂ ನಿರ್ದೇಶಕ ಅಕ್ಷರ ಕೆ.ವಿ. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ, ಶ್ರೀ ಸಂತೋಷ್ ಅನಂತಪುರ ಮೊದಲಾದವರು ಉಪಸ್ಥಿತರಿದ್ದು ನಿರ್ದೇಶಕ ಹುಲುಗಪ್ಪ ಕಟ್ಟೀಮನಿ ಅವರನ್ನು ಮತ್ತು ಕಲಾವಿದರನ್ನು ಸತ್ಕರಿಸಿದರು. ಆರಂಭದಲ್ಲಿ 'ಸಂಕಲ್ಪ' ತಂಡದ ದಶಮಾನೋತ್ಸವ ಸಂದರ್ಭದಲ್ಲಿ ಪಿ. ಶೇಷಾದ್ರಿ ನಿರ್ದೇಶಿಸಿದ ತಂಡದ ಕುರಿತಾದ ಸಾಕ್ಷ್ಯಚಿತ್ರದ ಪ್ರದರ್ಶನವು ನಡೆಯಿತು.



ಕರ್ನಾಟಕದ ಜೈಲುಗಳಲ್ಲಿದ್ದ ಕೈದಿಗಳಿಗೆ ರಂಗ ತರಬೇತಿ ನೀಡಿ ರಂಗಭೂಮಿಯ ಮೂಲಕ ಹೊಸ ಬದುಕನ್ನು ಕಟ್ಟಲು ಸುಮಾರು ಒಂದೂವರೆ ದಶಕಗಳಿಂದ ಸಂಕಲ್ಪ ತಂಡವು ಕಾರ್ಯ ನಡೆಸುತ್ತಿದೆ. ರಂಗಭೂಮಿಯನ್ನು ಕಾರಾಗೃಹದಲ್ಲಿರುವ ಬಂಧಿಗಳ ಮನಃಪರಿವರ್ತನೆಗೆ ಬಳಸಿ ಅವರಿಂದಲೇ ನಾಟಕಗಳನ್ನು ಆಡಿಸಿ ಮಹತ್ತರವಾದ ಸಾಧನೆಯನ್ನು ಈ ತಂಡವು ಮಾಡಿದೆ. ಸಂಘದಲ್ಲಿ ನಡೆದ ಪ್ರದರ್ಶನದಲ್ಲಿ ಶಿಕ್ಷೆ ಅನುಭವಿಸುತ್ತಿರುವ ಕೈದಿಗಳು ಭಾಗವಹಿಸಿರಲಿಲ್ಲ. ಈಗಾಗಲೇ ಜೈಲಿನಿಂದ ಬಿಡುಗಡೆಗೊಂಡವರು ಮತ್ತು ಸಂಕಲ್ಪ ತಂಡದೊಂದಿಗೆ ತೊಡಗಿಸಿಕೊಂಡಿರುವ ರಂಗ ಕಲಾವಿದರು ಮತ್ತು ತಂತ್ರಜ್ಞರು ಮಾರನಾಯಕ ನಾಟಕವನ್ನು ನವದೆಹಲಿಯಲ್ಲಿ ಪ್ರಸ್ತುತ ಪಡಿಸಿದರು. ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ಭಾರತ್ ರಂಗ್‌ಮಹೋತ್ಸವದಲ್ಲಿಯೂ ಈ ತಂಡದಿಂದ ನಾಟಕ ಪ್ರದರ್ಶನವಿತ್ತು.

ಷೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ ನಾಟಕವನ್ನು ಪ್ರೊ. ಶಿವಪ್ರಕಾಶ್ ಅವರು ಕನ್ನಡದ ಸಂಸ್ಕೃತಿಯ ಹಿನ್ನಲೆಯಲ್ಲಿ ಬರೆದಿದ್ದಾರೆ. ಅದರ ನಿರ್ದೇಶನ ಮತ್ತು ವಿನ್ಯಾಸವನ್ನು ಮಾಡಿರುವ ಹುಲುಗಪ್ಪ ಕಟ್ಟೀಮನಿ ಅವರು ನಾಟಕದ ಅಭಿನಯ, ರಂಗ ಸಜ್ಜಿಕೆ, ಬೆಳಕು, ವೇಷಭೂಷಣ, ಸಂಗೀತ ಮೊದಲಾದ ಎಲ್ಲಾ ವಿಭಾಗಗಳಲ್ಲೂ ಉತ್ಕೃಷ್ಟ ಮಟ್ಟದಲ್ಲಿರುವಂತೆ ನೋಡಿಕೊಂಡಿದ್ದಾರೆ. ನಾಟಕದಲ್ಲಿ ಅಭಿನಯಿಸಿದ ಎಲ್ಲ ಕಲಾವಿದರು ಉತ್ತಮ ಮಟ್ಟದ ವೃತ್ತಿ ರಂಗಭೂಮಿಯ ಕಲಾವಿದರಂತೆ ಅಭಿನಯಿಸಿ ನೆರೆದಿದ್ದ ನಾಟಕ ಪ್ರೇಮಿಗಳನ್ನು ರಂಜಿಸಿದರು. ಅ

***ಅಭಿಮತ ವರದಿ***





ಭೀಮರಾವ್ ಫಕೀರಪ್ಪ ಮುರಗೋಡರು, ವ್ಯಕ್ತಿ ಹಾಗೂ ಚಿತ್ರಕಲೆಯಲ್ಲಿ ಕನ್ನಡನಾಡಿನ ಅಪೂರ್ವ ಅಂತರರಾಷ್ಟ್ರೀಯ ಕಲಾವಿದರು. ಸುಮಾರು 500ಕ್ಕೂ ಮಿಕ್ಕಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗಣ್ಯರನ್ನು ಚಿತ್ರಿಸಿದ ಅವರ ಕುಂಚ ಪ್ರತಿಮೆ ಅಪ್ರತಿಮವಾದುದು. ಚಿತ್ರಕಲೆ, ನಾಟಕ ಕಲೆ, ಸಿನಿಮಾ, ಛಾಯಾಚಿತ್ರಣ, ಸಾಹಿತ್ಯ, ಸಂಗೀತ, ಸಾಮಾಜಿಕ ಸುಧಾರಣೆ ಹೀಗೆ ವಿವಿಧ ರಂಗಗಳಲ್ಲಿ ಉತ್ಕೃಷ್ಟ ಸಾಧನೆಯನ್ನು ಅವರು ಮಾಡಿದ್ದಾರೆ.

70 ವಸಂತಗಳನ್ನು ದಾಟಿರುವ ಭೀಮರಾವ್ ಮುರಗೋಡ ಅವರು ಚಿತ್ರ ಕಲೆಯಲ್ಲದೆ ನಾಟಕ ಕಲೆಯಲ್ಲೂ ಪಳಗಿದವರು. ನಾಟಕಗಳಲ್ಲಿ ಅಭಿನಯಿಸಿ ಡಾ. ಶಿವರಾಮ ಕಾರಂತ, ಬಿ.ವಿ. ಕಾರಂತ, ಗಿರೀಶ್ ಕಾರ್ನಾಡರಂತವರಿಂದ ಶಹಭಾಸ್ ಎನಿಸಿಕೊಂಡವರು. ಮಣ್ಣಿನ ಮಗ, ಸಿಂಧೂರ ಲಕ್ಷ್ಮಣ, ಶಾಂತಲಾ, ಆದಿ ಶಂಕರಾಚಾರ್ಯ ಚಲನಚಿತ್ರಗಳಲ್ಲಿ ವೈವಿಧ್ಯಮಯ ಪಾತ್ರ ನಿರ್ವಹಣೆ ಮಾಡಿದ ಕೀರ್ತಿ ಇವರದ್ದು.

ಬಡ ಮಕ್ಕಳಿಗಾಗಿ ಲಲಿತ ಕಲಾ ಶಾಲೆ ಹಾಗೂ ಅನಾಥಾಲಯಗಳನ್ನು ತೆರೆಯುವ ಕನಸು ಹೊತ್ತ ಮುರಗೋಡರಿಗೆ ಕಲೆಯಲ್ಲಿ ನಿಷ್ಣಾತರಾದ ಮಡದಿ ಶಾಲನ್ ಮುರಗೋಡ ಹಾಗೂ ಕಲಾಸಕ್ತರಾದ ಪುತ್ರ ಪುತ್ರಿಯರನ್ನು ಪಡೆದ ಸೌಭಾಗ್ಯ ಹೊಂದಿದ್ದಾರೆ. ದೆಹಲಿ ಕನ್ನಡ ಶಾಲೆ, ದೆಹಲಿ ಕರ್ನಾಟಕ ಸಂಘಗಳಲ್ಲಿ ಕುಟುಂಬ ಸಮೇತ ಸಕ್ರಿಯರಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಕಲಾ ಸೇವೆಯ ಜೊತೆಗೆ ಕನ್ನಡ ಸೇವೆಯನ್ನು ಮಾಡುತ್ತಿರುವ ಭೀಮರಾವ್ ಮುರಗೋಡ ಅವರು ಹಲವಾರ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ. ಅ

# ಕ್ರೀಡಾ ಸ್ಪರ್ಧೆಗಳು

ದೆಹಲಿ ಕರ್ನಾಟಕ ಸಂಘದ 2015–16ನೇ ಸಾಲಿನ ಅಂಬಿಕೇಶ್ ಕ್ರಿಕೆಟ್ ಪಂದ್ಯಾವಳಿ, ವಿವಿಧ ಕ್ರೀಡಾ ಸ್ಪರ್ಧೆಗಳು ಜನವರಿ 30 ಮತ್ತು ಫೆಬ್ರವರಿ 6,7 ಮತ್ತು 13 ಮತ್ತು 20, 2016ರಂದು ದೆಹಲಿ ಕರ್ನಾಟಕ ಸಂಘ ಮತ್ತು ಜೆ.ಎನ್.ಯು.ವಿನ ಹಳೇ ಕ್ಯಾಂಪಸ್‌ನ ಮೈದಾನದಲ್ಲಿ ನಡೆಯಿತು.

**ವಿವಿಧ ಸ್ಪರ್ಧೆಗಳ ಫಲಿತಾಂಶ**

**ಥ್ರೋಬಾಲ್ : (ಮಹಿಳೆಯರು)** 1. ದೆಹಲಿ ತುಳು ಸಿರಿ 2. ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ. 3. ಬೆಳ್ಳಿಯಪ್ಪಾಸ್ ಗ್ರೂಪ್

**ಲಗೋರಿ :** 1. ಕೆ.ಕೆ. ಫ್ರೆಂಡ್ಸ್ 2. ಬೆಳ್ಳಿಯಪ್ಪಾಸ್ ಗ್ರೂಪ್

**ಟೇಬಲ್ ಟೆನ್ನಿಸ್ :** (ಪುರುಷರು) 1. ಅಭಯ್ 2. ಪಿ. ದಿನೇಶ್ 3. ರಾಘವೇಂದ್ರ

**ಶಟಲ್ ಬ್ಯಾಡ್ಮಿಂಟನ್ ಸಿಂಗಲ್ಸ್ :** (15ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ರಾಘವೇಂದ್ರ 2. ಪಿ. ದಿನೇಶ್ 3. ಪ್ರಶಾಂತ್ ನಾಯಕ್

**ಶಟಲ್ ಬ್ಯಾಡ್ಮಿಂಟನ್ ಸಿಂಗಲ್ಸ್ :** (15 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ವಿ. ಪದ್ಮನಾಗಾರಾಜ 2. ಅನಿತಾ ಮೂರ್ತಿ 3. ಶಕುಂತಲಾ ನಾಯಕ್

**ಶಾಟ್‌ಪುಟ್ :** (35 ವರ್ಷ, ಮಹಿಳೆಯರು) 1. ಕಾವ್ಯಶ್ರೀ 2. ಮಮತಾ 3. ಮಂಜುಳಾ

**ಶಾಟ್‌ಪುಟ್ :** (36 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಜಯಲಕ್ಷ್ಮಿ 2. ಸವಿತಾ ಇನಾಮದಾರ 3. ಬಿ.ವಿ. ಮಮತಾ

**ಶಾಟ್ ಪುಟ್ :** (36–49ವರ್ಷ ಪುರುಷರು) 1. ವೈ.ಎಂ. ಹೆಗ್ಡೆ 2. ಡಾ. ಸಚಿತ್ ಶೆಟ್ಟಿ 3. ವೆಂಕಟೇಶ್ ಆರ್.ಎ.

**ಶಾಟ್‌ಪುಟ್ :** (50ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಬಿ. ಚಂದ್ರಪ್ಪ 2. ಟಿ.ಪಿ. ಬೆಳ್ಳಿಯಪ್ಪ 3. ದಾಸ್ಯ ನಾಯಕ್

**ಸೂಜಿ ದಾರ :** (40 ವರ್ಷ ಕಪಲ್ಸ್) 1. ಮಹಾದೇವ್ 2. ಚಂದ್ರಪ್ಪ 3. ಸಿದ್ದಲಿಂಗಪ್ಪ

**ಲಿಂಬೆ ಮತ್ತು ಚಮಚ :** (35 ವರ್ಷಕ್ಕಿಂತ ಕೆಳಗಿನ ಮಹಿಳೆಯರು) 1. ಮಮತಾ 2. ಶೋಭಾ ನಾಗರಾಜ 3. ನಳಿನಾ

**ಲಿಂಬೆ ಮತ್ತು ಚಮಚ :** (35 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಹೇಮಲತಾ 2. ಬಿ.ವಿ. ಮಮತಾ 3. ಲಕ್ಷ್ಮೀ

**200 ಮೀ. ಓಟ :** (ಪುರುಷರು) 1. ಸನ್ಮಾನ್ ಗೌಡ 2. ಸಾಯಿಕುಮಾರ್ 3. ಎಚ್. ನಾಗರಾಜ

**400 ಮೀ. ಓಟ :** (ಪುರುಷರು) 1. ಸನ್ಮಾನ್ ಗೌಡ 2. ಸಾಯಿಕುಮಾರ್ 3. ವೈ.ಎಂ. ಹೆಗ್ಡೆ

**100 ಮೀ. ಓಟ :** (41 ವರ್ಷ ಮೇಲ್ಪಟ್ಟ ಪುರುಷರು) 1. ವೈ.ಎಂ. ಹೆಗ್ಡೆ 2. ಮುರುಗನ್ ಜೆ.ಕೆ. 3. ಎಚ್.ಜಿ. ನಾಗರಾಜಯ್ಯ

**50 ಮೀ. ಓಟ :** (3–5 ವರ್ಷ) 1. ಅನ್ವೆಲ್ ಸಿಕ್ವೇರಾ 2. ಸ್ಕಂದ 3. ಆದಿತ್ಯ

**50ಮೀ. ಓಟ :** (6–8 ವರ್ಷ) 1. ಭಾವನ ಎಸ್.ಎನ್. 2. ಭೂಮಿಕಾ ಎಸ್.ಎನ್. 3. ಸಮುಧ್ಯತಾ

**100ಮೀ. ಓಟ :** (9–12ವರ್ಷ) 1. ಆರ್.ಕೆ. ಅನನ್ಯ 2. ಎನ್. ಡಿಂಪಲ್ 3. ಚೈತನ್ಯ ಡಿ.











**100ಮೀ. ಓಟ :** (15 ವರ್ಷ ಮೇಲ್ಪಟ್ಟವರು) 1. ಶ್ರೇಯ 2. ಕಾವ್ಯಶ್ರೀ ಎಸ್.ಪಿ. 3. ಶ್ವೇತಾ ಜಿ.

**100ಮೀ. ಓಟ :** (21–35 ವರ್ಷ ಮಹಿಳೆಯರು) 1. ಆರತಿ ಸಂಜೀವ್ 2. ಕಾವ್ಯಶ್ರೀ ಎಸ್.ಪಿ. 3. ಅಶ್ವಿನಿ ಪೂಜಾರಿ

**100ಮೀ. ಓಟ :** (36–40 ವರ್ಷ ಮಹಿಳೆಯರು) 1. ಜಯಲಕ್ಷ್ಮಿ ರಾಜಕುಮಾರ್ 2. ಆಶಾಲತಾ 3. ಸುಜಾತ ಮೂರ್ತಿ

**100ಮೀ. ಓಟ :** (41 ವರ್ಷ ಮೇಲ್ಪಟ್ಟ ಮಹಿಳೆಯರು) 1. ಸವಿತಾ ಚಂದ್ರಪ್ಪ 2. ಎ.ಎಚ್. ಅನಿತಾ 3. ಶಕುಂತಲಾ ನಾಯಕ್

**400ಮೀ. ಓಟ :** (ಮಹಿಳೆಯರು) 1. ಜಯಲಕ್ಷ್ಮಿ ರಾಜಕುಮಾರ್ 2 ಆರತಿ ಸಂಜೀವ್ 3. ಕಾವ್ಯಶ್ರೀ ಎಸ್.ಪಿ.

**ವೇಗ ನಡಿಗೆ :** (41–49 ವರ್ಷ, ಮಹಿಳೆಯರು) 1. ಅನಿತಾ ಎ.ಎಚ್. 2. ಕಮಲಾ 3. ಮಂಜುಳಾ ನಾಗರಾಜ

**50 ಮೀ. ಓಟ :** (6–8 ವರ್ಷ) 1. ಸಾಯಿ ಅಮರ್ತ್ಯ ಶೆಟ್ಟಿ 2. ನಿಖಿಲ್ 3. ಭುವನ್

**100 ಮೀ. ಓಟ :** (8–10 ವರ್ಷ) 1. ರೋಹನ್ ರಂಗನಾಥ್ 2. ಲಕ್ಷ್ಯ ನಾಗರಾಜ 3. ಅಭಿಷೇಕ್ ಎಸ್.

**100 ಮೀ. ಓಟ :** (11–12 ವರ್ಷ) 1. ಶ್ರೀಧನ್ ಮೂರ್ತಿ 2. ಲಿಖಿತ್ ಕುಮಾರ್ 3. ಧ್ರುವ್ ಪೂಜಾರಿ



**100 ಮೀ. ಓಟ :** (15–21 ವರ್ಷ ಪುರುಷರು) 1. ಸಾಯಿ ಕುಮಾರ್ 2. ಮನೀಶ್ ಪೂಜಾರಿ 3. ಚಿರಾಗ್ ಬಸವರಾಜು

**100 ಮೀ. ಓಟ :** (21 ವರ್ಷ ಮೇಲ್ಪಟ್ಟ ಪುರುಷರು) 1. ಸನ್ಮಾನ್ ಗೌಡ 2. ಎಚ್. ನಾಗರಾಜ 3. ಸಾಯಿ ಕುಮಾರ್

**50 ಮೀ ಮೂರು ಕಾಲಿನ ಓಟ :** (8–10 ವರ್ಷ) 1. ಲಕ್ಷ್ಯ ನಾಗರಾಜ ಮತ್ತು ಅಭಿಷೇಕ್ 2. ಶ್ರೀಧನ್ ಮೂರ್ತಿ ಮತ್ತು ಲಿಖಿತ್ ಕುಮಾರ್ 3. ಸಾಯಿ ಕುಮಾರ್ ಮತ್ತು ಸರ್ವೇಶ್

**50 ಮೀ ಮೂರು ಕಾಲಿನ ಓಟ :** 1. ಶ್ರೇಯಾ ಮತ್ತು ಡಿಂಪಲ್ 2. ಅನನ್ಯಾ ರಾಧಾಕೃಷ್ಣ ಮತ್ತು ಚೈತನ್ಯ 3. ಶ್ರೀವಿದ್ಯಾ ಮತ್ತು ಯಶಸ್ವಿನಿ

**50 ಮೀ ಮೂರು ಕಾಲಿನ ಓಟ :** (ಮಹಿಳೆಯರು) 1. ಪದ್ಮಾ ನಾಗರಾಜ ಮತ್ತು ಆರತಿ ಸಂಜೀವ್ 2. ಕೆ.ಜ್ಯೋತಿ ಮತ್ತು ಉಷಾ 3. ಆಶಾಲತಾ ಮತ್ತು ಜಯಲಕ್ಷ್ಮೀ

**400 ಮೀ. ಓಟ :** (45–49 ವರ್ಷ ಪುರುಷರು) 1. ವೈ.ಎಂ. ಹೆಗ್ಡೆ 2. ಎಚ್.ಜಿ. ನಾಗರಾಜಯ್ಯ 3. ರಾಜು ಆರ್

**200 ಮೀ. ವೇಗ ನಡಿಗೆ :** (50 ವರ್ಷ ಮೇಲ್ಪಟ್ಟ ಪುರುಷರು) 1. ಚಂದ್ರಪ್ಪ 2. ಟಿ.ಪಿ. ಬೆಳ್ಳಿಯಪ್ಪ 3. ದಾಸ್ಯ ನಾಯಕ್

**200 ಮೀ. ಓಟ :** (13–16 ವರ್ಷ) 1. ಸಾಯಿ ಕುಮಾರ್ 2. ಎಂ. ಸರ್ವೇಶ್ 3. ಲಿಖಿತ್ ಕುಮಾರ್

**ಕೇರಂ ಸಿಂಗಲ್ಸ್ :** (15 ವರ್ಷ ಮೇಲ್ಪಟ್ಟ ಪುರುಷರು) 1. ತ್ಯಾಗೇಶ್ ಮೂರ್ತಿ 2. ವಿಜಯ್ ಕುಮಾರ್ ಆರ್

**ಕೇರಂ ಸಿಂಗಲ್ಸ್ :** (15 ವರ್ಷ ಮೇಲ್ಪಟ್ಟ ಮಹಿಳೆಯರು) 1. ಬಿ. ವಿಜಯಶ್ರೀ 2. ಬಿ.ವಿ. ಮಮತಾ

**ಕೇರಂ ಡಬಲ್ಸ್ :** (15 ವರ್ಷ ಮಿಕ್ಸ್) 1. ಎಲ್. ದಿವಾಕರ್ ಮತ್ತು ಮುತ್ತಪ್ಪ ಮುನ್ನಾಲ್ 2. ಹೆರಾಲ್ಡ್ ಸಿಕ್ವೇರಾ ಮತ್ತು ಬಿ. ವಿಜಯಶ್ರೀ

**ಚೆಸ್ :** (10 ವರ್ಷ ಮೇಲ್ಪಟ್ಟವರು) 1. ಪಿ. ದಿನೇಶ್ 2. ಪ್ರವೀಣ ಕುಮಾರ್ 3. ಹೆರಾಲ್ಡ್ ಸಿಕ್ವೇರಾ









# ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಟ್ರೋಫಿ



ದೆಹಲಿ ಕರ್ನಾಟಕ ಸಂಘವು ಏರ್ಪಡಿಸಿದ 2015–16ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಪ್ರಶಸ್ತಿಯನ್ನು ಕರ್ನಾಟಕ ಬ್ಯಾಂಕ್‌ನಲ್ಲಿ ವೃತ್ತಿಯಲ್ಲಿರುವ ಯುವಕರ ಕ್ರಿಕೆಟ್ ತಂಡ ಕೆಬಿಎಲ್ ಯುನೈಟೆಡ್ ತಂಡವು ಎರಡನೇ ಬಾರಿಗೆ ತನ್ನದಾಗಿಸಿಕೊಂಡಿತು.


ಹದಿಮೂರು ತಂಡಗಳನ್ನೊಳಗೊಂಡ ಈ ಸಾಲಿನ ಕ್ರಿಕೆಟ್ ಪಂದ್ಯಾವಳಿಯು ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಹಳೇ ಕ್ಯಾಂಪಸ್‌ನಲ್ಲಿರುವ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ವಿಶೇಷ ಕರ್ತವ್ಯ ಗುಂಪಿನ ಮೈದಾನದಲ್ಲಿ ಜನವರಿ 30, ಮತ್ತು ಫೆಬ್ರವರಿ 6, 7 ಮತ್ತು 13ರಂದು ನಡೆಯಿತು. ನಾಕೌಟ್ ಕ್ರಮದಲ್ಲಿ ನಡೆದ ಪಂದ್ಯಾವಳಿಯ ಅಂತಿಮ ಪಂದ್ಯವು ದೆಹಲಿ ತುಳುಸಿರಿ ತಂಡ ಮತ್ತು ಕೆಬಿಎಲ್ ಯುನೈಟೆಡ್ ತಂಡದ ಜತೆ ನಡೆಯಿತು.

ಪಂದ್ಯದ ಆರಂಭದಲ್ಲಿ ಬ್ಯಾಟಿಂಗ್ ಮಾಡಿದ ಕೆಬಿಎಲ್ ಫೈಟರ್ಸ್ ತಂಡವು ದೆಹಲಿ ತುಳುಸಿರಿ (ಸೌತ್ ಕೆನರಾ ಕ್ಲಬ್) ತಂಡಕ್ಕೆ ಫೈನಲ್‌ನಲ್ಲಿ ಜಯ ಸಾಧಿಸಲು 62 ರನ್‌ಗಳ ಗುರಿಯನ್ನು ನೀಡಿತು. ಕೊನೆಯವರೆಗೂ ರೋಮಾಂಚನಕಾರಿಯಾಗಿದ್ದ ಈ ಪಂದ್ಯವು ಕೆಬಿಎಲ್ ಯುನೈಟೆಡ್ ತಂಡದ ಅಶೋಕ್ ಮತ್ತು ಶೇಖರ್ ಎಂ.ಆರ್. ಅವರ ಅದ್ಭುತ ಬೌಲಿಂಗ್‌ನಿಂದಾಗಿ ಆ ತಂಡವು ಜಯ ಸಾಧಿಸಿ 2015–16ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಹರ್ಷಿತ್ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಇದೇ ಸಂದರ್ಭದಲ್ಲಿ ಹಾಜರಿದ್ದ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಈ ಕ್ರಿಕೆಟ್ ಪಂದ್ಯಾವಳಿಯು ತುಂಬಾ ಅಚ್ಚುಕಟ್ಟಾದ ರೀತಿಯಲ್ಲಿ ನಡೆದುದಕ್ಕೆ ಎಲ್ಲ ಕ್ರೀಡಾಳುಗಳಿಗೆ, ಕ್ರೀಡಾ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಸಂಚಾಲಕತ್ವವನ್ನು ವಹಿಸಿದ ಶ್ರೀ ಸಿ.ಎಂ. ನಾಗರಾಜ ಮತ್ತು ಸಮಿತಿಯ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸಿ ಪಂದ್ಯ ಪುರುಷೋತ್ತಮ ಪ್ರಶಸ್ತಿ ಹಾಗೂ ರೋಲಿಂಗ್ ಶೀಲ್ಡ್‌ನ್ನು ನೀಡಿದರು.


ಇದೇ ದಿನ ನಡೆದ ಮೊದಲ ಸೆಮಿಫೈನಲ್‌ನಲ್ಲಿ ದೆಹಲಿ ತುಳುಸಿರಿ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್ ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ದೆಹಲಿ ತುಳುಸಿರಿ ತಂಡವು ಬೆಳ್ಳಿಯಪ್ಪಾಸ್ ಗ್ರೂಪ್ ತಂಡಕ್ಕೆ ಫೈನಲ್ ತಲುಪಲು 68ರನ್‌ಗಳ ಲಕ್ಷ್ಯವನ್ನು ನೀಡಿತು. ದೆಹಲಿ ತುಳುಸಿರಿ ತಂಡವು 4ರನ್‌ಗಳಿಂದ ಜಯಸಾಧಿಸಿ ಫೈನಲ್ ತಲುಪಿತು. ರಾಘವ ಶರ್ಮಾ ಅವರು ಪಂದ್ಯ ಶ್ರೇಷ್ಠರಾದರು.

ಎರಡನೇ ಸೆಮಿಫೈನಲ್ ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ಮತ್ತು ಕೆಬಿಎಲ್ ಫೈಟರ್ಸ್ ನಡುವೆ ನಡೆದು ಮೊದಲು ಬ್ಯಾಟಿಂಗ್ ಮಾಡಿದ ಕೆ.ಬಿ.ಎಲ್ ಫೈಟರ್ಸ್ ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡಕ್ಕೆ ಫೈನಲ್ ತಲುಪಲು 86 ರನ್‌ಗಳ ಗುರಿಯನ್ನು ನೀಡಿತು. ಕೆಬಿಎಲ್ ಫೈಟರ್ಸ್ 18ರನ್‌ಗಳಿಂದ ಜಯ ಸಾಧಿಸಿ ಫೈನಲ್ ತಲುಪಿತು. ಶ್ರೀನಿಧಿ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.





# ಪಂದ್ಯಾವಳಿ ಕೆಬಿಎಲ್ ಯುನೈಟೆಡ್‌ಗೆ



ಜನವರಿ 30ರಂದು ಮೊದಲ ಸುತ್ತಿನ ಪಂದ್ಯದಲ್ಲಿ ಜನಕಪುರಿ ಕನ್ನಡ ಕೂಟ ತಂಡ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್–2 ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಜನಕಪುರಿ ಕನ್ನಡ ಕೂಟ ತಂಡವು ಮೊದಲು ಬ್ಯಾಟಿಂಗ್ ಮಾಡಿ ಬೆಳ್ಳಿಯಪ್ಪಾಸ್ ಗ್ರೂಪ್–2 ತಂಡಕ್ಕೆ ಜಯಗಳಿಸಲು 53ರನ್‌ಗಳ ಲಕ್ಷ್ಯವನ್ನು ನೀಡಿತು. ಬೆಳ್ಳಿಯಪ್ಪಾಸ್ ಗ್ರೂಪ್–2 ತಂಡವು ಒಂಭತ್ತು ವಿಕೆಟುಗಳಿಂದ ಜಯ ಸಾಧಿಸಿತು. ಸನ್ಮಾನ್ ಗೌಡ ಅವರು ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಪಾತ್ರರಾದರು.

ಎರಡನೇ ಪಂದ್ಯದಲ್ಲಿ ಕರ್ನಾಟಕ ಅಡ್ವೋಕೇಟ್ಸ್ ಹಾಗೂ ಕರ್ನಾಟಕ ಭವನ ಫೇಸ್–2 ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ಅಡ್ವೋಕೇಟ್ಸ್, ಕರ್ನಾಟಕ ಭವನ ಫೇಸ್–2 ತಂಡಕ್ಕೆ 56ರನ್‌ಗಳ ಲಕ್ಷ್ಯವನ್ನು ನೀಡಿತು. ಕರ್ನಾಟಕ ಭವನ ಫೇಸ್–2 ತಂಡವು 7 ಒವರ್‌ಗಳಲ್ಲಿ ಈ ಲಕ್ಷ್ಯವನ್ನು ಮುಟ್ಟುವಲ್ಲಿ ಸಫಲವಾಯಿತು. ಪ್ರವೀಣ್ ಕುಮಾರ್ ಅವರು ಪಂದ್ಯ ಪುರುಷೋತ್ತಮರಾದರು.

ಫೆಬ್ರವರಿ 6ರಂದು ನಡೆದ ಮೂರನೇ ಪಂದ್ಯವು ಬೆಳ್ಳಿಯಪ್ಪಾಸ್ ಗ್ರೂಪ್ ಮತ್ತು ಕದಂಬ ಕನ್ನಡಿಗರು ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕದಂಬ ಕನ್ನಡಿಗರು ತಂಡವು ಬೆಳ್ಳಿಯಪ್ಪಾಸ್ ಗ್ರೂಪ್‌ಗೆ 63ರನ್‌ಗಳ ಲಕ್ಷ್ಯವನ್ನು ನೀಡಿತು. ಬೆಳ್ಳಿಯಪ್ಪಾಸ್ ಗ್ರೂಪ್ 10 ವಿಕೆಟುಗಳಿಂದ ಜಯಗಳಿಸಿತು. ಪಂದ್ಯ ಪುರುಷೋತ್ತಮ ಪ್ರಶಸ್ತಿಯನ್ನು ನೀರಜ್ ಗಳಿಸಿದರು.

ನಾಲ್ಕನೇ ಪಂದ್ಯದಲ್ಲಿ ಜೆ.ಎಸ್.ಎಸ್.–ಬಿ ಹಾಗೂ ದೆಹಲಿ ತುಳುಸಿರಿ –2 ತಂಡಗಳ ನಡುವೆ ನಡೆದು ಮೊದಲು ಬ್ಯಾಟಿಂಗ್ ಮಾಡಿದ ದೆಹಲಿ ತುಳುಸಿರಿ –2 ತಂಡವು ಜೆ.ಎಸ್.ಎಸ್.–ಬಿ ತಂಡಕ್ಕೆ 50 ರನ್‌ಗಳ ಲಕ್ಷ್ಯವನ್ನು ನೀಡಿತು. ಜೆ.ಎಸ್.ಎಸ್.–ಬಿ ತಂಡವು 7.4 ಒವರ್‌ಗಳನ್ನು ಈ ಲಕ್ಷ್ಯವನ್ನು ಸಾಧಿಸಿತು. ಜೆ.ಎಸ್.ಎಸ್.–ಬಿ ತಂಡದ ತಂಡದ ರಾಜೇಶ್ ಅವರು ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಪಾತ್ರರಾದರು.

ಐದನೇ ಪಂದ್ಯದಲ್ಲಿ ಜೆ.ಎಸ್.ಎಸ್.–ಎ ಮತ್ತು ಕೆ.ಬಿ.ಎಲ್. ವೈಕಿಂಗ್ ತಂಡಗಳ ನಡುವೆ ನಡೆದು ಜೆ.ಎಸ್.ಬಿ. ತಂಡವು ಜಯಗಳಿಸಿತು.

ಆರನೇ ಪಂದ್ಯವು ಕಳೆದ ಬಾರಿಯ ಅಂಬಿಕೇಶ್ ಸ್ಮಾರಕ ಟ್ರೋಫಿ ಪಡೆದ ಕೆಬಿಎಲ್ ಯುನೈಟೆಡ್ ಮತ್ತು ಜೆ.ಎಸ್.ಎಸ್.–ಬಿ ತಂಡದ ಜೊತೆ ಫೆಬ್ರವರಿ 7ರಂದು ನಡೆದ ಪಂದ್ಯದಲ್ಲಿ ಕೆಬಿಎಲ್ ಯುನೈಟೆಡ್ ಜಯ ಸಾಧಿಸಿ ಸೆಮಿಫೈನಲ್ ಹಂತವನ್ನು ತಲುಪಿತು. ರಾಘವೇಂದ್ರ ಅವರು ಪಂದ್ಯ ಶ್ರೇಷ್ಠರಾದರು.

ಏಳನೇ ಪಂದ್ಯವು ಜೆ.ಎಸ್.ಎಸ್.–ಎ ಮತ್ತು ದೆಹಲಿ ತುಳುಸಿರಿ ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಸೌತ್ ಕೆನರಾ ಕ್ಲಬ್ ತಂಡವು ಜೆ.ಎಸ್.ಎಸ್. ತಂಡಕ್ಕೆ 70 ರನ್ ಲಕ್ಷ್ಯವನ್ನು ನೀಡಿತು. ದೆಹಲಿ ತುಳುಸಿರಿ ತಂಡವು ಜಯಸಾಧಿಸಿತು. ರಾಘವ ಶರ್ಮಾ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಎಂಟನೇ ಪಂದ್ಯವು ಕರ್ನಾಟಕ ಭವನ ಫೇಸ್–2 ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್ ನಡುವೆ ನಡೆದ ಪಂದ್ಯದಲ್ಲಿ ಬೆಳ್ಳಿಯಪ್ಪಾಸ್ ಗ್ರೂಪ್ 63ರನ್‌ಗಳಿಂದ ಜಯ ಸಾಧಿಸಿತು. ಜೆ.ಜಿ. ಗೋರೆ ಅವರು ಪಂದ್ಯ ಶ್ರೇಷ್ಠರಾದರು.

ಫೆಬ್ರವರಿ 13ರಂದು ಒಂಭತ್ತನೇ ಪಂದ್ಯವು ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್–2 ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡವು ಬೆಳ್ಳಿಯಪ್ಪಾಸ್ ಗ್ರೂಪ್ –2 ತಂಡಕ್ಕೆ 121ರನ್‌ಗಳ ಲಕ್ಷ್ಯವನ್ನು ನೀಡಿತು. ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡವು 53ರನ್‌ಗಳಿಂದ ಜಯ ಸಾಧಿಸಿತು. ಸಂಜಯ್ ಟಿ.ಸಿ. ಅವರು ಪಂದ್ಯ ಶ್ರೇಷ್ಠರಾದರು. ಅ

*ಅಭಿಮತ ವರದಿ*



# ಸ್ವರಾಂಜಲಿ ಹಾಸ್ಯ-ಲಾಸ್ಯ-ಗಾಯನ




ಸ್ವರಾಂಜಲಿ ಹಾಸ್ಯ–ಲಾಸ್ಯ–ಗಾಯನ ಕಾರ್ಯಕ್ರಮವು ಇದೇ ಫೆಬ್ರವರಿ 13ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆಯಿತು. ಅನೇಕ ಚಲನಚಿತ್ರಗೀತೆಗಳನ್ನೊಳಗೊಂಡ ಈ ಕಾರ್ಯಕ್ರಮದಲ್ಲಿ ವಿಶೇಷ ಆಕರ್ಷಣೆಯಾಗಿದ್ದವರು ಹಾಸ್ಯ ಕಲಾವಿದರ 'ಕೋಗಿಲೆ ಕೊಟ್ರೇಶ್' ಅವರು. ಸ್ಥಳೀಯ ಕಲಾವಿದರು ಸಿನಿಮಾ ಧ್ವನಿ ಸುರುಳಿಯೊಂದಿಗೆ ತಮ್ಮ ಧ್ವನಿಯನ್ನು ಮೇಳೈಸಿ ಜನರ ಮನ ರಂಜಿಸಿದರೆ, ಕೋಗಿಲೆ ಕೊಟ್ರೇಶ್‌ರವರು ತಮ್ಮ ಹಾಸ್ಯ ಹಾಗೂ ಗಾಯನದಿಂದ ಜನರ ಮನಸೂರೆಗೊಂಡರು. ಜನರಿಂದ ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಶ್ರೀ ಆರ್. ರೇಣುಕುಮಾರ್ ಅವರು ನಿರೂಪಿಸಿದರು.

ಸ್ವರಾಂಜಲಿ ತಂಡವು ದಶಕಗಳ ಹಿಂದೆ ಅಶೋಕ್ ಕುಂಬಾರ್, ಪೂಜಾ ಪಿ.ರಾವ್ ಹಾಗೂ ರಮೇಶ್ ಟಿ.ಎಸ್ ಅವರು ಸ್ಥಳೀಯ ಕಲಾವಿದರಿಗಾಗಿ ನಿರ್ಮಿಸಿ ದೆಹಲಿ, ಗುರ್‌ಗಾಂವ್ ಹಾಗೂ ಚಂಡೀಗಢದಲ್ಲಿ ಕಾರ್ಯಕ್ರಮವನ್ನು ನೀಡಿದ್ದರು. ತದನಂತರ ಸ್ತಬ್ಧವಾಗಿದ್ದ ಈ ತಂಡವನ್ನು ಮತ್ತೆ ವೇದಿಕೆಯ ತನಕ ಕರೆತಂದವರು ಎಸ್. ಗಿರೀಶ್ ಹಾಗೂ ಎ.ಟಿ. ಶ್ರೀನಿವಾಸ್‌ರವರು. ಅಶೋಕ್ ಕುಂಬಾರ್‌ರವರ ಮಾರ್ಗದರ್ಶನದಿಂದ ತಯಾರಿಗೊಂಡ ಹಲವು ಕಲಾವಿದರುಗಳು ಮಂಜುಳಾ ನಾಗರಾಜ್, ಪೂಜಾ ಪಿ.ರಾವ್, ಕು. ಪ್ರೇರಣಾ ರಾವ್, ಜಯಶ್ರೀ ಬಸವರಾಜು, ಹಾಗೂ ಚಿದಂಬರ ಕೋಟೆ. ತಾಂತ್ರಿಕ ವರ್ಗದಲ್ಲಿ ನೆರವು ನೀಡಿದವರು ಶಿವಾನಂದ ಇಂಗಳೇಶ್ವರ ಮತ್ತು ಕಾರ್ಯಕ್ರಮ ಯಶಸ್ವಿಯಾಗಿ ಮೂಡಿ ಬರಲು ಕಾರಣಕರ್ತರಾದವರು ಹರಿಪ್ರಿಯಾ ಮತ್ತು ಅವರೊಡನೆ ಕೈಗೂಡಿಸಿದವರು ಕಾರ್ತಿಕ್ ಕುಮಾರ್‌ರವರು.

**ಸ್ವರಾಂಜಲಿ ತಂಡವು ದಶಕಗಳ ಹಿಂದೆ ಅಶೋಕ್ ಕುಂಬಾರ್, ಪೂಜಾ ಪಿ.ರಾವ್ ಹಾಗೂ ರಮೇಶ್ ಟಿ.ಎಸ್ ಅವರು ಸ್ಥಳೀಯ ಕಲಾವಿದರಿಗಾಗಿ ನಿರ್ಮಿಸಿ ದೆಹಲಿ, ಗುರ್‌ಗಾಂವ್ ಹಾಗೂ ಚಂಡೀಗಢದಲ್ಲಿ ಕಾರ್ಯಕ್ರಮವನ್ನು ನೀಡಿದ್ದರು**

ಈ ಕಾರ್ಯಕ್ರಮ ನಿಜವಾಗಿಯೂ ತುಂಬಾ ವಿಶೇಷವಾಗಿ ಮೂಡಿ ಬಂದಿದೆ. ರಾಷ್ಟ್ರಗೀತೆಯೊಂದಿಗೆ ಪ್ರಾರಂಭವಾದ ಈ ಕಾರ್ಯಕ್ರಮ ಎಂದಿಗೂ ವೇದಿಕೆಯ ಮೇಲೆ ಬಾರದೇ ಇರದ ಅನೇಕ ಮುತ್ತೈದೆಯರಿಂದ ತುಳಸೀ ಪೂಜೆ ಮಾಡಿಸಿ, ದೀಪ ಬೆಳಗಿಸಿ, ಚಾಲನೆಯಾದ ಈ ಕಾರ್ಯಕ್ರಮ ಅನೇಕ ಮಧುರ ಚಿತ್ರಗೀತೆಗಳಿಂದ ಕೂಡಿದ್ದು, ಮಧ್ಯದಲ್ಲಿ ಕೋಗಿಲೆ ಕೊಟ್ರೇಶ್‌ರವರ ಹಾಸ್ಯ ಹಾಗೂ ಗಾಯನ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸಿತು.

ಇನ್ನು ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ 'ಶ್ರೀಕಂಠ ವಿಷಕಂಠ' ಎಂಬ ಭಕ್ತಿಗೀತೆಯಿಂದ ಆರಂಭಗೊಂಡು ಡಾ. ರಾಜ್‌ಕುಮಾರ್ ಅಭಿಮಾನಿಗಳಿಗಾಗಿ 70ರ ದಶಕದ ಮಧುರ ಗೀತೆಗಳನ್ನು ಅಶೋಕ್ ಕುಂಬಾರ್ ಮತ್ತು ಮಂಜುಳಾ ನಾಗರಾಜ್ ಅವರು ಹಾಡಿದರೆ, ತದನಂತರದ ಗೀತೆಗಳನ್ನು ಪೂಜಾ ಪಿ. ರಾವ್, ಜಯಶ್ರೀ ಬಸವರಾಜು, ಚಿದಂಬರ ಕೋಟೆ, ಎ.ಟಿ. ಶ್ರೀನಿವಾಸರವರು ಹಾಡಿದರು. ಪಡ್ಡೆ ಹುಡುಗರಿಗಾಗಿ ಕೆಲವು 'ಮಾಸ್ ಹಾಡು'ಗಳಿಗೆ ಗಿರೀಶ್‌ರವರು ಹಾಡಿ ಜನರನ್ನು ಮನರಂಜಿಸಿದರು. ಪುಟಾಣಿ ಪ್ರೇರಣಾರವರು ತಮ್ಮ ಮಧುರ ಕಂಠದಿಂದ ಪ್ರೇಕ್ಷಕರ ಮನಸೆಳೆಯುವಲ್ಲಿ ಯಶಸ್ವಿಯಾದರು. ಮಕ್ಕಳಿಗೆ ಪರೀಕ್ಷೆಯ ಸಮಯವಾಗಿದ್ದರೂ ಸಭಾಂಗಣ ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿತ್ತು. ಅ

*ಚಿದಂಬರ ಕೋಟೆ*




## ಖುಷಿ ಕೊಟ್ಟ 'ಸ್ವರಾಂಜಲಿ'

ಸಂಗೀತ ರಸಮಂಜರಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಹಳ ಜನಪ್ರಿಯ. ಸಿನಿಮಾ ಹಾಡುಗಳಲ್ಲಿ ಇರುವ ವೈವಿಧ್ಯಮಯ ಸಾಹಿತ್ಯ ಮತ್ತು ಸಂಗೀತ ಇದಕ್ಕೆ ಕಾರಣ. ಸಿನಿಮಾ ಹಾಡುಗಳನ್ನು ಜನರು ಇಂದಿಗೂ ಮೆಲುಕು ಹಾಕುವುದನ್ನು ನೀವು ಕಾಣಬಹುದು. ದೂರದ ದೆಹಲಿಯಲ್ಲಿ ಕನ್ನಡದ ರಸಮಂಜರಿ ಅಥವಾ ಆರ್ಕೆಸ್ಟ್ರಾ ತಂಡಗಳನ್ನು ಕರೆಸಿಕೊಳ್ಳುವುದು ದುಬಾರಿಯೆಂದೆನಿಸಿಕೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ದೆಹಲಿ ಕಲಾವಿದರೇ ಸೇರಿ ಕಟ್ಟಿಕೊಂಡ 'ಸ್ವರಾಂಜಲಿ' ತಂಡ ಈ ಕೊರತೆಯನ್ನು ನೀಗಿಸಿದೆ.

ಇದೇ 13 ಫೆಬ್ರವರಿ 2016ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 'ಸ್ವರಾಂಜಲಿ' ತಂಡ ಪ್ರಸ್ತುತಪಡಿಸಿದ 'ಹಾಸ್ಯ ಲಾಸ್ಯ ಗಾಯನ ಸಂಜೆ' ಕಾರ್ಯಕ್ರಮ ಯಶಸ್ವಿಯಾಗಿ ನಡೆದು ನೆರೆದ ಕೇಳುಗರಿಗೆ ಖುಷಿ ನೀಡಿದೆ. ಹಾಸ್ಯ ಕಲಾವಿದರಾದ ಕೋಗಿಲೆ ಕೊಟ್ರೇಶ್ ಅವರು ಭಾಗವಹಿಸಿದ್ದು ಇನ್ನೂ ವಿಶೇಷ. ಸ್ವತಃ ಉತ್ತಮ ಗಾಯಕರೂ ಆಗಿರುವ ಕೊಟ್ರೇಶ್ ಅವರು ನಡು ನಡುವೆ ಹಾಸ್ಯ ಪ್ರಸಂಗಗಳನ್ನು ಹೇಳಿ ನಗಿಸಿದರು.

ಇಲ್ಲಿ ಮಂಜುಳಾ ನಾಗರಾಜ, ಪೂಜಾ ಪಿ. ರಾವ್, ಜಯಶ್ರೀ ಬಸವರಾಜು, ಕು. ಪ್ರೇರಣಾ ರಾವ್, ಅಶೋಕ್ ಕುಂಬಾರ್, ಗಿರೀಶ್, ಚಿದಂಬರ ಕೋಟೆ, ಎ.ಟಿ. ಶ್ರೀನಿವಾಸ ಮೊದಲಾದವರು ಹಾಡಿದ ವೈವಿಧ್ಯಮಯ ಸಿನಿಮಾ ಗೀತೆಗಳು ಮನರಂಜಿಸಿತು. ಇವರೆಲ್ಲರೂ ಖ್ಯಾತ ಹಿನ್ನೆಲೆ ಗಾಯಕರಿಗೆ ಏನೂ ಕಡಿಮೆ ಇಲ್ಲ ಎಂಬಂತೆ ಹಾಡಿದ್ದರು. ಆರ್. ರೇಣುಕುಮಾರ್ ಅವರ ನಿರೂಪಣೆಯು ಲವಲವಿಕೆಯಿಂದ ಕೂಡಿತ್ತು. ಮನಸ್ಸಿಗೆ ಮುದ ನೀಡುವ ಇಂತಹ ಸಂಗೀತ ಸಂಜೆಗಳು ರಾಜಧಾನಿಯಲ್ಲಿ ಆಗಾಗ ನಡೆಯುತ್ತಿರಲಿ ಎಂದು ಆಶಿಸುತ್ತೇನೆ. ಸ್ವರಾಂಜಲಿಗೆ ನನ್ನ ಶುಭ ಹಾರೈಕೆಗಳು. ಅ

*ಡಾ. ವೈ. ಅವನೀಂದ್ರನಾಥ್ ರಾವ್*



# ಅಳಿಕೆ ರಾಮಯ್ಯ ರೈ ಸ್ಮರಣೆ

ಇದೇ ಫೆಬ್ರವರಿ 21ರಂದು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ 'ದೆಹಲಿ ಮಿತ್ರ' ಹಾಗೂ 'ಬಲ್ಲಿರೇನಯ್ಯಾ' ಮಾಸಪತ್ರಿಕೆಯ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕದ ಧೀಮಂತ ಯಕ್ಷಗಾನ ಕಲಾವಿದ 'ಅಳಿಕೆ ರಾಮಯ್ಯ ರೈ' ಅವರ ಸ್ಮೃತಿ–ಕೃತಿ ಹಾಗೂ ಅವರ ಕೊಡುಗೆಯನ್ನು ವಿವರವಾಗಿ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ದೆಹಲಿ ಮಿತ್ರದ ಸಂಚಾಲಕರು ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿರುವ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು 'ಬಲ್ಲಿರೇನಯ್ಯಾ' ಮಾಸಪತ್ರಿಕೆಯು ನಾಲ್ಕನೇ ವರ್ಷಕ್ಕೆ ಪದಾರ್ಪಣೆ ಮಾಡುವ ಸಂದರ್ಭದಲ್ಲಿ ಮಾಸಪತ್ರಿಕೆಯ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡುತ್ತಾ ಪತ್ರಿಕೆಯ ಸಂಪಾದಕರಾದ ಶ್ರೀ ತಾರಾನಾಥ ವರ್ಕಾಡಿ ಅವರ ಸತತ ಪ್ರಯತ್ನದ ಫಲವಾಗಿ ಯಕ್ಷಗಾನಕ್ಕೆ ಮೀಸಲಾಗಿಟ್ಟಿರುವ ಈ ಮಾಸಪತ್ರಿಕೆ ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ಹೊರಬರುತ್ತಿರುವುದನ್ನು ಪ್ರಶಂಶಿಸಿದರು. ದೆಹಲಿ ಮಿತ್ರ ಪ್ರಕಟಿಸಿ ಈ ಹಿಂದೆ ಕರ್ನಾಟಕದಲ್ಲಿ ಬಿಡುಗಡೆಗೊಳಿಸಿದ್ದ ಅಳಿಕೆ ರಾಮಯ್ಯ ರೈ ಅವರ ಕುರಿತಾದ ವಿಶೇಷ ಕೃತಿಯನ್ನು ಶ್ರೀ ಬಾಲಕೃಷ್ಣ ನಾಯ್ಕ್ ಅವರು ನೆರೆದ ಸಭೆಗೆ ಪರಿಚಯಿಸಿದರು.

ಈ ಪುಸ್ತಕದ ವಿಶೇಷವೆಂದರೆ ಒಬ್ಬ ಹಿರಿಯ ಯಕ್ಷಗಾನ ಕಲಾವಿದನನ್ನು ಆಗಿನ ಕಾಲದ ಕಲೆಯ ಚೌಕಟ್ಟಿನಲ್ಲಿ ಅತ್ಯಂತ ಸರಳ ಹಾಗೂ ಸುಂದರವಾಗಿ ಸೃಷ್ಟಿಸಿ ಇತಿಹಾಸದಲ್ಲಿ ಮರೆಯಾಗಿ ಹೋಗಿದ್ದ ಎಷ್ಟೋ ಸತ್ಯಗಳನ್ನು ಒಂದು ಕಡೆ ಜೋಡಿಸಿ ಯಕ್ಷಗಾನ ಲೋಕದ ಕನ್ನಡ ಹಾಗೂ ತುಳು ಎರಡೂ ಭಾಷೆಗಳಲ್ಲಿ ಅಳಿಕೆಯವರ ಅಸಮಾನ್ಯ ಕೊಡುಗೆಯನ್ನು ಯಕ್ಷಗಾನ ಕಲಾಪ್ರಿಯರಿಗೆ ಹಾಗೂ ಕನ್ನಡ ಸಾಹಿತ್ಯಪ್ರೇಮಿಗಳಿಗೆ ಒದಗಿಸುವಂತಹ ಒಂದು ಒಳ್ಳೆಯ ಕೆಲಸವನ್ನು ಸಂಪಾದಕರಾದ ಡಾ. ನಿತ್ಯಾನಂದ ಬಿ. ಶೆಟ್ಟಿ ಮಾಡಿದ್ದಾರೆ ಎಂದರು.

ಈ ಪುಸ್ತಕದಲ್ಲಿ ಅಳಿಕೆಯವರು ತಮ್ಮ ಆತ್ಮಚರಿತ್ರೆಯಂತಹ ಬರಹದಲ್ಲಿ ಯಕ್ಷಗಾನದ ಹುಟ್ಟು, ಇತಿಹಾಸ ಬೆಳವಣಿಗೆಯನ್ನು ಒಂದು ಅಕಾಡೆಮಿಕ್ ನೆಲೆಯಲ್ಲಿ ವಿವರಿಸಿದ್ದಾರೆ. ತಮ್ಮ ಹತ್ತು–ಹನ್ನೊಂದನೇ ವರ್ಷಕ್ಕೆ ಯಕ್ಷಗಾನ ರಂಗಕ್ಕೆ ಇಳಿದ ಅಳಿಕೆಯವರು ಯಕ್ಷಗಾನವನ್ನು ಒಂದು ಕಲೆಯಾಗಿ ಸ್ವೀಕರಿಸಿರುವುದರ ಜೊತೆಗೆ ಅವರ ಹಿನ್ನಲೆ ಮತ್ತು ಪ್ರಸ್ತುತತೆ ಕುರಿತು ಆಳವಾದ ಜ್ಞಾನವನ್ನು ಸಂಪಾದಿಸಿದ್ದಾರೆ.

ಅವರು ಬರೆದ ಈ ಬಿಡಿಬರಹಗಳಲ್ಲಿ ಯಕ್ಷಗಾನ ರಂಗದಲ್ಲಿರುವ ಕೆಲವು ಕಲಾವಿದರು ಬರೆದಿರುವ ಆತ್ಮಚರಿತ್ರೆಯ ಕುರಿತೂ ಹೇಳುತ್ತಾರೆ. ಅಂತಹ ಬಹಳಷ್ಟು ಕಲಾವಿದರು ತಾವು ಬರೆದಿರುವ ಆತ್ಮ ಚರಿತ್ರೆಗಳಲ್ಲಿ ಆತ್ಮವಂಚನೆ ಮಾಡಿರುತ್ತಾರೆ. ನಿಜವನ್ನು ಮರೆಯಾಗಿರಿಸಿದ್ದಾರೆ. ಎಷ್ಟೋ ವ್ಯಸನಗಳನ್ನು ಹೊಂದಿರುವ ಕಲಾವಿದರು ತಾವು ತುಂಬಾ ಸಂಭಾವಿತರು ಎಂಬಂತೆ ತಮ್ಮ ಆತ್ಮಚರಿತ್ರೆಗಳಲ್ಲಿ ಬರೆದಿರುತ್ತಾರೆ ಎಂದು ಅಳಿಕೆಯವರು ವಿವರಿಸಿದ್ದಾರೆ. ಆದರೆ ತಮ್ಮಲ್ಲಿದ್ದ ಕೆಲವು ಕುಂದು ಕೊರತೆಗಳನ್ನು ಅಳಿಕೆಯವರು ಯಾವುದೇ ಮುಚ್ಚುಮರೆಯಿಲ್ಲದೆ ಹಂಚಿಕೊಂಡಿರುವರಲ್ಲದೆ, ಇದು ಮುಂದಿನ ಜನಾಂಗಕ್ಕೆ ಪಾಠವಾಗಬೇಕು ಎಂದು ತಿಳಿಸಿದ್ದಾರೆ.

**ಅಳಿಕೆ ರಾಮಯ್ಯ ರೈ ಅವರ ವೇಷ, ನೃತ್ಯ, ಕುಣಿತ, ಹಾವಭಾವ ಹಾಗೂ ಮಾತುಗಾರಿಕೆ ಎಲ್ಲವನ್ನು ಅವರ ವಿಭಿನ್ನ ಪಾತ್ರಗಳ ಉದಾಹರಣೆಗಳ ಮೂಲಕ, ಅಭಿಮನ್ಯು, ಬಬ್ರುವಾಹನ, ಚಂದ್ರಮುಖಿ, ದಮಯಂತಿ, ಸುಧನ್ವ, ಕರ್ಣ, ಋತುಪರ್ಣ, ಕೋಟಿ ಚೆನ್ನಯ್ಯದ ಬಲ್ಲಾಳ ಹೀಗೆ ಪುಂಡವೇಷ, ಸ್ತ್ರೀವೇಷ ಮತ್ತು ರಾಜವೇಷಗಳಲ್ಲಿ ಅರ್ಥಗರ್ಭಿತವಾದ ಜನರ ಮನದಾಳದಲ್ಲಿ ನೆಲೆನಿಲ್ಲುವಂತಹ ಅಭೂತಪೂರ್ವ ಅಭಿನಯ ನೀಡಿದ ಅಳಿಕೆಯವರನ್ನು ತುಂಬಿದ ಸಭೆ ಸಂಭ್ರಮದಿಂದ ಆನಂದಿಸುವಂತೆ ವಿವರಿಸಿದರು**

ಅಳಿಕೆಯವರು ಯಕ್ಷಗಾನ ಕ್ಷೇತ್ರಕ್ಕೆ ನೀಡಿದ ವಿಶೇಷ ಕೊಡುಗೆಯನ್ನು ಶ್ರೀ ಸಖಾರಾಮ ಉಪ್ಪೂರು ಅವರು ಕೂಲಂಕುಷವಾಗಿ ವಿವರಿಸಿದರು. ಅಳಿಕೆ ರಾಮಯ್ಯ ರೈ ಅವರ ವೇಷ, ನೃತ್ಯ, ಕುಣಿತ, ಹಾವಭಾವ ಹಾಗೂ ಮಾತುಗಾರಿಕೆ ಎಲ್ಲವನ್ನು ಅವರ ವಿಭಿನ್ನ ಪಾತ್ರಗಳ ಉದಾಹರಣೆಗಳ ಮೂಲಕ ಅಭಿಮನ್ಯು, ಬಬ್ರುವಾಹನ, ಚಂದ್ರಮುಖಿ, ದಮಯಂತಿ, ಸುಧನ್ವ, ಕರ್ಣ, ಋತುಪರ್ಣ, ಕೋಟಿ ಚೆನ್ನಯ್ಯದ ಬಲ್ಲಾಳ ಹೀಗೆ ಪುಂಡವೇಷ, ಸ್ತ್ರೀವೇಷ ಮತ್ತು ರಾಜವೇಷಗಳಲ್ಲಿ ಅರ್ಥಗರ್ಭಿತವಾದ ಜನರ ಮನದಾಳದಲ್ಲಿ ನೆಲೆನಿಲ್ಲುವಂತಹ ಅಭೂತಪೂರ್ವ ಅಭಿನಯ ನೀಡಿದ ಅಳಿಕೆಯವರನ್ನು ತುಂಬಿದ ಸಭೆ ಸಂಭ್ರಮದಿಂದ ಆನಂದಿಸುವಂತೆ ವಿವರಿಸಿದರು.

ಅಳಿಕೆಯವರ ಬಾಲ್ಯ ಜೀವನ, ವೃತ್ತಿ ಜೀವನ ಹಾಗೂ ತಿರುಗಾಟದ ನಂತರದ ಜೀವನವನ್ನು ಹಾಗೂ ಅವರು ಯಕ್ಷಗಾನಕ್ಕೆ ನೀಡಿದ ಕೆಲವು ಅತ್ಯಮೂಲ್ಯ ಕೊಡುಗೆಗಳನ್ನು ಸಭೆಗೆ ವಿವರಿಸಿದರು.

ಬಲ್ಲಿರೇನಯ್ಯಾ ಪತ್ರಿಕೆಯ ಸಂಪಾದಕರೂ ಯಕ್ಷಗಾನ ಕ್ಷೇತ್ರದ ಹಿರಿಯ ಕಲಾವಿದರು, ಅಂಕಣಕಾರರು ಹಾಗೂ ಬರಹಗಾರರೂ ಆದಂತಹ ಶ್ರೀ ವರ್ಕಾಡಿಯವರು ಮಾತನಾಡುತ್ತಾ ಅಳಿಕೆಯಂತಹ ಒಬ್ಬ ಹಿರಿಯ ಯಕ್ಷಗಾನ ಚೇತನಕ್ಕೆ ದೆಹಲಿ ಮಿತ್ರ ಇಂತಹ ಒಂದು ಒಳ್ಳೆಯ ಪುಸ್ತಕವನ್ನು ಪ್ರಕಟಿಸುವುದರ ಮೂಲಕ ಯಕ್ಷಗಾನ ಕ್ಷೇತ್ರದ ದಂತಕಥೆಯಾಗಿರುವ ಅಳಿಕೆಯವರನ್ನು ಸದಾ ಸ್ಮರಣೀಯರಾಗಿರುವಂತೆ ಮಾಡಿದೆ. ಯಕ್ಷಗಾನ ಕ್ಷೇತ್ರದಲ್ಲಿ ವಿಶೇಷ ಕೊಡುಗೆ ನೀಡಿದ ಅಳಿಕೆ ಅವರನ್ನು ಕರ್ನಾಟಕ ಸರ್ಕಾರ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆಯಾದರೂ ಅಳಿಕೆ ಅವರ ಕುರಿತಾಗಿ ಯಾವುದೇ ಇಂತಹ ಒಂದು ಪುಸ್ತಕಗಳು ಪ್ರಕಟವಾಗದೇ ಇದ್ದ ಕೊರತೆಯನ್ನು 'ದೆಹಲಿ ಮಿತ್ರ' ನೆರವೇರಿಸಿದೆ. ಇಂತಹ ಒಬ್ಬ ಮಹೋನ್ನತ ಕಲಾವಿದನನ್ನು, ಅವರ ಬದುಕನ್ನು ಬಹಳ ಅಚ್ಚುಕಟ್ಟಾಗಿ ಮುಂದಿನ ಜನಾಂಗಕ್ಕೆ ಮಾರ್ಗದರ್ಶನದ ರೂಪದಲ್ಲಿ ಈ ಕೈಪಿಡಿಯನ್ನು ಹೊರತರಲಾಗಿದೆ ಎಂದು ವರ್ಕಾಡಿಯವರು ನುಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಮಾತನಾಡುತ್ತ ದೆಹಲಿ ಮಿತ್ರ ಹೊರತಂದಿರುವ ಈ ಅಳಿಕೆಯವರ ಕುರಿತಾದ ಪುಸ್ತಕ ಯಕ್ಷಗಾನ ಕಲಾ ಪ್ರಪಂಚಕ್ಕೆ ಅಮೋಘ ಕೊಡುಗೆ ನೀಡಿದ ಒಬ್ಬ ಮಹಾನ್ ಕಲಾವಿದನಿಗೆ ಸಂದ ಗೌರವ ಹಾಗೂ ಈ ಪುಸ್ತಕ ಕಲಾ ರಸಿಕರು ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ, ಕಲೆಯ ಕ್ಷೇತ್ರದಲ್ಲಿ ಸಂಶೋಧನೆ ಮಾಡುವ ಸಂಶೋಧಕರಿಗೂ ಕೂಡಾ ಒಂದು ಕೈಪಿಡಿಯಾಗಲಿದೆ ಎಂದು ನುಡಿದರು. ಶ್ರೀ ಕಾರ್ತಿಕ್ ರೈ ಅವರು ಯಕ್ಷಗಾನದ ಶೈಲಿಯಲ್ಲಿ ಗಣೇಶ ಸ್ತುತಿಯೊಂದಿಗೆ ಕಾರ್ಯಕ್ರಮವನ್ನು ಆರಂಭಿಸಿ ಇಡೀ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಅ

*ಅಭಿಮತ ವರದಿ*

# ಅಗಲಿದ ಮಹನೀಯರು



**ಡಾ. ಸಾ.ಶಿ. ಮರುಳಯ್ಯ**

ಹಿರಿಯ ಸಾಹಿತಿ ಡಾ. ಸಾ.ಶಿ. ಮರುಳಯ್ಯ ಅವರು ಇದೇ ಫೆಬ್ರವರಿ 5ರಂದು ವಿಧಿವಶರಾಗಿದ್ದಾರೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಸಾಸಲು ಗ್ರಾಮದಲ್ಲಿ ಜನಿಸಿದ್ದ ಸಾಸಲು ಶಿವರುದ್ರಯ್ಯ ಮರುಳಯ್ಯ ಅವರು ಪ್ರಾಧ್ಯಾಪಕರಾಗಿ ಬೆಂಗಳೂರು, ಮೈಸೂರು, ಮಂಗಳೂರು ಸೇರಿದಂತೆ ವಿವಿಧ ಕಡೆ ಸುದೀರ್ಘ ಸೇವೆ ಸಲ್ಲಿಸಿದ್ದರು. ಡಾ.ಸಾ.ಶಿ. ಮರುಳಯ್ಯ ಅವರು ಕಾವ್ಯ, ಪ್ರಹಸನ, ಕಾದಂಬರಿ, ಸಣ್ಣಕಥೆ, ನಾಟಕ, ವಿಮರ್ಶೆ ಸೇರಿದಂತೆ 60ಕ್ಕೂ ಅಧಿಕ ಕೃತಿಗಳನ್ನು ರಚನೆ ಮಾಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಿಂದ 'ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ' ಕುರಿತ ಮಹಾ ಪ್ರಬಂಧಕ್ಕೆ ಪಿಎಚ್‌ಡಿ ಪದವಿ ಪಡೆದಿದ್ದಾರೆ. ಶಿವತಾಂಡವ, ಕೆಂಗನಕಲ್ಲು, ರೂಪಸಿ ಮುಂತಾದ ಕವನ ಸಂಕಲನ, ನೆಲದ ಸೊಗಡು, ಹೇಮಕೂಟ ಕಥಾ ಸಂಕಲನ, ಮರೀಚಿಕೆ, ವಿಜಯವಾತಪಿ ನಾಟಕ, ಭಾರತ ರತ್ನ ನೆಹರು, ದೇವುಡು ಜೀವನ ಚರಿತ್ರೆ ಸಾ.ಶಿ.ಮರುಳಯ್ಯ ಅವರ ಪ್ರಮುಖ ಕೃತಿಗಳು.



**ಬಿ. ಸುಬ್ರಹ್ಮಣ್ಯ ಪ್ರಸಾದ್**

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ಸುಬ್ರಹ್ಮಣ್ಯ ಪ್ರಸಾದ್ ಬಿ. ಅವರು ಇದೇ ಫೆಬ್ರವರಿ 10 ರಂದು ನಿಧನರಾದರು. ಅವರು ನವದೆಹಲಿಯ ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿ ಶ್ರೀ ಬಸವಪ್ರಭು ಎಸ್. ಪಾಟೀಲ್ ಅವರ ಜತೆ 1993ರಿಂದ ವಕೀಲಿ ವೃತ್ತಿ ಮಾಡುತ್ತಿದ್ದರು.



**ಡಾ. ಎಲ್.ಆರ್. ಕಡಿಯಾಳಿ**

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಡಾ. ಎಲ್.ಆರ್. ಕಡಿಯಾಳಿ ಅವರು ಇದೇ ಫೆಬ್ರವರಿ 18ರಂದು ನಿಧನರಾದರು. ಅವರು ಕೇಂದ್ರ ಸರಕಾರದ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಇಲಾಖೆಯಲ್ಲಿ ಮುಖ್ಯ ಇಂಜಿನಿಯರ್ ಆಗಿ ನಿವೃತ್ತಿ ಹೊಂದಿದ ನಂತರ ಹೆದ್ದಾರಿ ರಸ್ತೆ ಕನ್ಸಲ್ಟೆನ್ಸಿಗೆ ಸಂಬಂಧಿಸಿದಂತೆ ತಮ್ಮದೇ ಆದ ಡಾ. ಎಲ್.ಆರ್. ಕಡಿಯಾಳಿ ಅಂಡ್ ಅಸೋಸಿಯೇಟ್ಸ್ ಕಂಪೆನಿಯನ್ನು ಪ್ರಾರಂಭಿಸಿದರು. ಉಡುಪಿ ಜಿಲ್ಲೆಯ ಕಡಿಯಾಳಿಯವರು ಸಿವಿಲ್ ಇಂಜಿನಿಯರ್ ಆಗಿದ್ದು ಅವರ ಬಾಲ್ಯವನ್ನು ಕೊಡಗಿನಲ್ಲಿ ಕಳೆದರು. ದೆಹಲಿ ಕರ್ನಾಟಕ ಸಂಘ ಸೇರಿದಂತೆ ದೆಹಲಿಯ ಹಲವಾರು ಸಂಘ ಸಂಸ್ಥೆಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು.



**ನಂಜೇ ಗೌಡ**

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ನಂಜೇ ಗೌಡ ಅವರು ಇದೇ ಫೆಬ್ರವರಿ ಒಂದರಂದು ಅಲ್ಪ ಕಾಲದ ಅನಾರೋಗ್ಯದಿಂದ ನಿಧನರಾಗಿದ್ದಾರೆ. ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಸಕ್ರಿಯವಾಗಿ ಕನ್ನಡದ ಚಟುವಟಿಕೆಗಳಲ್ಲಿ ಪಾಲ್ಗೊಂಡು ಕನ್ನಡಕ್ಕಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಭವನದಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಕರ್ನಾಟಕದ ಹಲವಾರು ಮಂತ್ರಿಗಳು ಹಾಗೂ ಗಣ್ಯರಿಗೆ ಪ್ರೋಟೋಕಾಲ್ ಆಫೀಸರ್ ಆಗಿ ಕೆಲಸ ಮಾಡಿರುತ್ತಾರೆ. ಕರ್ನಾಟಕ ಭವನದ ಉದ್ಯೋಗಿಯಾಗಿದ್ದಾಗ ಹಲವಾರು ಮುಖ್ಯಮಂತ್ರಿಗಳೂ ಸೇರಿದಂತೆ ಮಂತ್ರಿಗಳು, ಸಂಸದರು, ಶಾಸಕರು, ಸಾಹಿತಿಗಳು ಮತ್ತು ಕಲಾವಿದರಿಗೂ ಸಹ ಗೌಡರು ಸೇವೆ ಸಲ್ಲಿಸಿದ್ದಾರೆ.



**ಇರುವೈಲ್ ಸುಬ್ರಹ್ಮಣ್ಯ ಭಟ್**

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಸುಬ್ರಹ್ಮಣ್ಯ ಭಟ್ ಅವರು ಕಳೆದ ನವೆಂಬರ್ 17ರಂದು ತಾಯ್ನಾಡಿನಲ್ಲಿ ನಿಧನ ಹೊಂದಿರುತ್ತಾರೆ. 1983ರಲ್ಲಿ ದೆಹಲಿಯ ಭಜಗೋವಿಂದಂ ರೆಸ್ಟೋರೆಂಟ್‌ನಲ್ಲಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ ಅವರು 1990ರಲ್ಲಿ 'ಗೋವರ್ಧನ್' ಎಂಬ ಹೊಸ ಹೋಟೆಲನ್ನು ಆರಂಭಿಸಿ ಹರಿಯಾಣದಲ್ಲಿಯೂ ಇದರ ಶಾಖೆಯನ್ನು ತೆರೆದು 2015 ರವರೆಗೆ ನಡೆಸಿ ನಿವೃತ್ತಿಯನ್ನು ಪಡೆದು ತಾಯ್ನಾಡಿಗೆ ತೆರಳಿದ್ದರು.



# ಶ್ರದ್ಧಾಂಜಲಿ ಸಭೆ

ದೆಹಲಿ ಕರ್ನಾಟಕ ಸಂಘವು ಡಾ. ಎಲ್.ಆರ್. ಕಡಿಯಾಳಿ ಹಾಗೂ ಶ್ರೀ ಬಿ. ಸುಬ್ರಹ್ಮಣ್ಯ ಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲು ಇದೇ ಫೆಬ್ರವರಿ 27ರಂದು ಸಂಘದಲ್ಲಿ ಸಭೆಯನ್ನು ಆಯೋಜಿಸಿತ್ತು.

ಈ ಸಂದರ್ಭದಲ್ಲಿ ಡಾ. ಕಡಿಯಾಳಿ ಅವರ ನಿಕಟವರ್ತಿ ಹಾಗೂ ಹಿರಿಯ ಕನ್ನಡಿಗ ಶ್ರೀ ಎಂ.ಸಿ. ವೆಂಕಟೇಶ್ ಅವರು ಡಾ. ಕಡಿಯಾಳಿ ಅವರ ಕುರಿತು ಮಾತಾಡಿ ಅವರು ಮೃದು ಹಾಗೂ ಮಿತಭಾಷಿ ಮತ್ತು ಅಪಾರವಾದ ಜ್ಞಾನವನ್ನು ಹೊಂದಿದ್ದರು ಎಂದರು. ಕರ್ನಾಟಕ ಕಂಡ ಅತ್ಯಂತ ಮೇಧಾವಿ ಪ್ರತಿಭಾವಂತ ಇಂಜಿನಿಯರುಗಳಲ್ಲಿ ಒಬ್ಬರಾದ ಕಡಿಯಾಳಿ ಅವರು ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಅಮೋಘ ಸೇವೆ ಸಲ್ಲಿಸಿದ್ದಾರೆ ಎಂದು ನುಡಿದರು. ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯವಾದಿ ಶ್ರೀ ಬಸವಪ್ರಭು ಎಸ್. ಪಾಟೀಲ್ ಅವರು ಸುಬ್ರಹ್ಮಣ್ಯ ಪ್ರಸಾದ್ ಬಿ. ಅವರ ಕುರಿತು ಅವರು ತುಂಬಾ ಸರಳ ಹಾಗೂ ನಿಷ್ಠಾವಂತ ಜೀವಿಯಾಗಿದ್ದರು. ಸದಾ ನಗುಮೊಗದ ಅವರು ಎಲ್ಲರಿಗೂ ಸಹಕಾರಿ ಮತ್ತು ಆತ್ಮೀಯರಾಗಿದ್ದರು ಎಂದರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಈ ಸಂದರ್ಭದಲ್ಲಿ ಮಾತನಾಡಿ ಡಾ. ಕಡಿಯಾಳಿ ಹಾಗೂ ಸುಬ್ರಹ್ಮಣ್ಯ ಪ್ರಸಾದ್ ಅವರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲುವಿಕೆಯ ದುಃಖವನ್ನು ಸಹಿಸುವ ಶಕ್ತಿ ಅವರ ಕುಟುಂಬಕ್ಕೆ ದೊರೆಯಲಿ ಎಂದು ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಸಂಘದ ಮಾಜೀ ಅಧ್ಯಕ್ಷ ಶ್ರೀ ಐ. ರಾಮಮೋಹನ್ ರಾವ್, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಕೋಶಾಧಿಕಾರಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಉಪಾಧ್ಯಕ್ಷರಾದ ಶ್ರೀಮತಿ ಆಶಾಲತ ಎಂ, ಶ್ರೀಮತಿ ಎಸ್.ಸಿ. ಹೇಮಲತ, ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು, ಮೃತರ ಸ್ನೇಹಿತರು ಮತ್ತು ಸಂಘದ ಸದಸ್ಯರು ಮೊದಲಾದವರು ಮಾತನಾಡಿ ಶ್ರದ್ಧಾಂಜಲಿ ಅರ್ಪಿಸಿದರು.

ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಕರ್ನಾಟಕ ಭವನದ ಸಿಬ್ಬಂದಿ ವರ್ಗ ಹಾಗೂ ದೆಹಲಿ ಒಕ್ಕಲಿಗ ಗೌಡ ಸಂಘದ ಪದಾಧಿಕಾರಿಗಳು ಸೇರಿದಂತೆ ನೆರೆದಿದ್ದ ಗೌಡರ ಅಭಿಮಾನಿಗಳು ಅಗಲಿದ ನಂಜೇ ಗೌಡ ಅವರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಫೆಬ್ರವರಿ ಎರಡರಂದು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು. ಸಿ.ಎಂ. ನಾಗರಾಜ, ಕೆ.ಎಸ್.ಜಿ. ಶೆಟ್ಟಿ, ಮಾಜೀ ಕಾರ್ಯದರ್ಶಿ ಆರ್. ರೇಣುಕುಮಾರ್ ಮೊದಲಾದವರು ಅವರ ಸ್ಫಟಿಕದಂತಹ ವ್ಯಕ್ತಿತ್ವ, ಪರೋಪಕಾರಿ ಗುಣ, ಸರಳತೆ, ಸಜ್ಜನಿಕೆ ಮತ್ತು ದೃಢತೆಯನ್ನು ಕೊಂಡಾಡುವುದರ ಜೊತೆಗೆ ಅವರ ಆತ್ಮಕ್ಕೆ ಶಾಂತಿ ಸಿಗುವಂತೆ ಕೋರಿ ಶ್ರದ್ಧಾಂಜಲಿ ಅರ್ಪಿಸಿದರು.

ದೆಹಲಿ ಒಕ್ಕಲಿಗ ಗೌಡ ಸಂಘವು ಮೃತ ನಂಜೇಗೌಡರ ಆತ್ಮಕ್ಕೆ ಶಾಂತಿಕೋರಿ ಫೆಬ್ರವರಿ 3ರಂದು ಸಂತಾಪ ಸೂಚಿಸಿತು. ಗೌಡ ಸಂಘದ ಅಧ್ಯಕ್ಷರಾದ ಕೆ.ಎಸ್. ಸೋಮಶೇಖರ್, ದೆಹಲಿ ಕನ್ನಡ ಶಾಲೆಯ ಅಧ್ಯಕ್ಷರಾದ ಡಾ. ಗುಡ್ಡೇಗೌಡ, ಕೃಷಿಕ್ ಸರ್ವೋದಯ ಫೌಂಡೇಶನ್‌ನ ಅಧ್ಯಕ್ಷರಾದ ಶ್ರೀ ಎನ್.ಎ. ಮಾಧವ ಅವರು ನಂಜೇ ಗೌಡ ಅವರ ಆತ್ಮಕ್ಕೆ ಶಾಂತಿ ಕೋರಿ ಅವರ ಪರಿವಾರದವರಿಗೆ ದುಃಖ ಸಹಿಸುವ ಶಕ್ತಿಯನ್ನು ಕೊಡಲೆಂದು ಪ್ರಾರ್ಥಿಸಿದರು. ಅ

*ಅಭಿಮತ ವರದಿ*

# ತಾಯಿ



ಮಾರ್ಚ್ 8 ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ. ವಿಶ್ವದಾದ್ಯಂತ ಮಹಿಳೆಯರು ಈ ದಿನವನ್ನು ಬಹಳ ಸಂಭ್ರಮದಿಂದ ಆಚರಿಸುತ್ತಾರೆ. ಜನನಿ, ತಾಯಿ, ಅಮ್ಮ ಹೀಗೆ ಮಾತೃ ಸ್ವರೂಪಿಯಾದ ಸ್ತ್ರೀ ಎಲ್ಲ ಉಗಮದ ಮೂಲ. ಭೂಮಿತಾಯಿ, ತಾಯಿನುಡಿ, ತಾಯಿನಾಡು, ಮಾತೃಭೂಮಿ, ಮಾತೃಭಾಷೆ ಹೀಗೆ ನಮ್ಮೆಲ್ಲ ಅತ್ಯಂತ ಪ್ರಮುಖವಾದ ಅಂಶಗಳು ಸ್ತ್ರೀಲಿಂಗದಿಂದಲೇ ಸಂಬೋಧಿತಗೊಳ್ಳುತ್ತದೆ.

ರಾಮಾಯಣ ಮಹಾಭಾರತ ಮಹಾಕಾವ್ಯಗಳೂ ಕೂಡ ಸೀತೆ, ದ್ರೌಪದಿಯಂತಹ ಸ್ತ್ರೀಪಾತ್ರಗಳ ಸುತ್ತಲೂ ಹಣೆಯಲ್ಪಟ್ಟಿವೆ. ಜಗತ್ತಿನ ಇತರ ನೂರಾರು ಮಹಾಕಾವ್ಯಗಳೂ ಕೂಡಾ ಸ್ತ್ರೀ ಅಥವಾ ತಾಯಿಯನ್ನು ಕೇಂದ್ರ ಬಿಂದುವನ್ನಾಗಿ ಹೊಂದಿವೆ. ಟಾಲ್‌ಸ್ಟಾಯ್, ರವೀಂದ್ರನಾಥ್ ಠಾಗೂರ್, ಮಹಾತ್ಮ ಗಾಂಧಿ, ಕುವೆಂಪು ಇನ್ನೂ ಹಲವಾರು ಮಹಾಪುರುಷರ ಬರಹಗಳಲ್ಲಿ ಎದ್ದು ಕಾಣುವ ಅಂಶ ತಾಯಿ ಇಲ್ಲವೆ ಮಾತೃಶಕ್ತಿ. 'ಮಾತೃದೇವೋಭವ' ಎಂಬ ಉಕ್ತಿಯೂ ಕೂಡ ತಾಯಿಗಿಂತ ಮಿಗಿಲಿಲ್ಲ, ಉಪ್ಪಿಗಿಂತ ರುಚಿಯಿಲ್ಲ ಎಂಬ ನಾಣ್ಣುಡಿಯಂತೆ ತಾಯಿಯ ಸ್ಥಾನವನ್ನು ಅತ್ಯಂತ ಉನ್ನತ ಮಟ್ಟದಲ್ಲಿಟ್ಟು ಗೌರವಿಸಿದೆ. ನಾವು ನಡೆದು ಬಂದ ಚರಿತ್ರೆಯನ್ನು ನೋಡಿದರೆ ಮನುಕುಲದ ಎಲ್ಲ ಆಗುಹೋಗುಗಳಿಗೆ ತಾಯಿ ನಾಂದಿಯಾಗುತ್ತಾಳೆ, ಹೊತ್ತು-ಹೆತ್ತು, ಎತ್ತಿ-ಮುದ್ದಾಡಿ, ತುತ್ತಿಟ್ಟು, ಕೈಹಿಡಿದು ನಡೆಸಿ, ಬೆಳೆಸಿ ಶುಶ್ರೂಷೆ ಮಾಡಿ ಸದಾ ಕಾಪಾಡುವ ತಾಯಿ ತನ್ನ ಹಸಿವು, ಬಾಯಾರಿಕೆಗಳನ್ನು ಒತ್ತಿಟ್ಟು ಮಕ್ಕಳ ಏಳ್ಗೆಗಾಗಿ ನಿರಂತರ ಶ್ರಮಿಸುವ ಒಂದು ಅಸಾಮಾನ್ಯ ಅದ್ಭುತ ಹಾಗೂ ಸರಿಸಾಟಿಯಿಲ್ಲದ ಶಕ್ತಿ.

ನಮ್ಮ ಮನೆಗಳಲ್ಲಿ ನಾವು ಹೆಣ್ಣು ಮತ್ತು ಗಂಡು ಮಕ್ಕಳನ್ನು ಬೆಳೆಸುವ ರೀತಿ ನಾವು ನಮ್ಮ ಸ್ತ್ರೀ ವರ್ಗಕ್ಕೆ, ತಾಯಿಗೆ ತೋರುವ ಗೌರವ, ಪ್ರೀತ್ಯಾದರಗಳ ದ್ಯೋತಕವಾಗಬೇಕು, ಗಂಡಿಗೊಂದು ಹೆಣ್ಣಿಗೊಂದು ತರನಾದ ತಾರತಮ್ಯದ ನೀತಿಯನ್ನು ನಾವು ಪಾಲಿಸಿದ್ದಾದರೆ ಮುಂದೆ ಬೆಳೆದ ಈ ಹೆಣ್ಣು ಗಂಡು ಸದಾ ಈ ತಾರತಮ್ಯದ ಜಗತ್ತಿನಲ್ಲೇ ಸದಾ ಪೈಪೋಟಿ ನಡೆಸುತ್ತಾ ಬದುಕನ್ನ ಕಳೆಯಬೇಕಾಗುತ್ತೆ. ಇದಕ್ಕೆ ಹೊರತಾಗಿ ಪ್ರತೀ ಮನೆಗಳಲ್ಲೂ ಪ್ರತಿಯೊಬ್ಬ ತಂದೆ ತಾಯಿಗಳು ಹೆಣ್ಣು ಮತ್ತು ಗಂಡು ಮಕ್ಕಳನ್ನು ಯಾವುದೇ ರೀತಿಯ ಭೇಧ ಭಾವಗಳಿಲ್ಲದೆ ಅವರಿರ್ವರೂ ಸರಿಸಮಾನರು ಎಂಬಂತೆ ಅವರಲ್ಲಿ ಎಲ್ಲಾ ರೀತಿಯ ಆತ್ಮಸ್ಥೈರ್ಯ, ಪ್ರೀತಿ, ಗೌರವಗಳನ್ನು ತುಂಬಿ ಬೆಳೆಸಿದ್ದೇ ಆದರೆ ಮುಂದಿನ ಜನಾಂಗ ಇಂದು ಅನುಭವಿಸುತ್ತಿರುವ ಈ ಹೀನಾಯ ಸ್ಥಿತಿಯನ್ನು ಎದುರಿಸಬೇಕಾಗುವುದಿಲ್ಲ. ಸ್ತ್ರೀ ಪುರುಷರ ನಡುವಿನ ದೈಹಿಕ ವ್ಯತ್ಯಾಸಗಳ ಹೊರತಾಗಿ ಬೇರೆ ಯಾವುದೇ ರೀತಿಯ ತಾರತಮ್ಯ, ಬೇಧ ಭಾವಗಳನ್ನು ನಾವು ಮಕ್ಕಳನ್ನು ಬೆಳೆಸುವಾಗ ಅವರ ತಲೆಯಲ್ಲಿ ತುಂಬಿದೆವಾದರೆ ಯಾವುದೇ ರೀತಿಯ ಅಂತರರಾಷ್ಟ್ರೀಯ ದಿನಾಚರಣೆಗಳಾಗಲಿ, ಕಾನೂನುಗಳಾಗಲಿ, ಮಹಿಳೆಯರನ್ನ ಪುರುಷ ಸಮಾಜದಲ್ಲಿ ಗೌರವದಿಂದ ಕಾಣುವಂತೆ ಮಾಡುವುದು ಕಷ್ಟದ ಕೆಲಸ. ಮೂಲಭೂತ ಬದಲಾವಣೆ ನಮ್ಮ ಮನದಲ್ಲಿ, ಮನೆಗಳಲ್ಲಿ, ನಾವು ಮಕ್ಕಳನ್ನು ಬೆಳೆಸುವ ರೀತಿಯಲ್ಲಿ ನಮ್ಮ ಸಮಾಜದ ಆಚಾರ ವಿಚಾರಗಳಲ್ಲಿ, ವ್ಯವಹಾರಗಳಲ್ಲಿ ಆದಾಗ ಮಾತ್ರ ಸ್ತ್ರೀ ಪುರುಷರ ನಡುವಿನ ಈ ಕಂದಕ, ಅರ್ಥಹೀನ, ಮೇಲು-ಕೀಳು, ಅಬಲೆ-ಸಬಲೆ ಮನೋಭಾವನೆ ಬೇರು ಸಹಿತ ಕಿತ್ತೊಗೆಯಬಹುದಾಗಿದೆ.

ಇಂದಿನ ಈ ಯಾಂತ್ರಿಕ ಯುಗದಲ್ಲಿ, ಹಣವೇ ಸರ್ವಸ್ವ ಎಂಬಂತಹ ಅರ್ಥಹೀನ ವ್ಯವಸ್ಥೆಯಲ್ಲಿ 'ತಾಯಿ' ಎಂಬ ಈ ಅಮೂಲ್ಯ ಸಂಬಂಧದ ಅರ್ಥವೇ ನಶಿಸಿ ಹೋಗುತ್ತಿದೆ. ಸ್ತ್ರೀ ಇಂದು ಒಂದು 'ವಸ್ತುವಾಗಿ', 'ಆಟಿಕೆಯಾಗಿ', 'ಸೌಂದರ್ಯ ಸಾಧನ'ವಾಗಿ ಎಲ್ಲೆಂದರಲ್ಲಿ ತನ್ನ ಸ್ವಂತಿಕೆ, ಅಸ್ತಿತ್ವ ಮತ್ತು ರೂಪವನ್ನೇ ಕಳೆದುಕೊಳ್ಳುವಂತಹ ಭೀಕರ ಸ್ಥಿತಿ ಎದುರಾಗುತ್ತಿದೆ. ಹಿಂದಿನ ಆ ವಿಶೇಷ ಗೌರವ ಸ್ಥಾನಮಾನ, ಸಂಬಂಧ ಎಲ್ಲವೂ ನಶಿಸುತ್ತಾ ಹೋಗಿ ತಾಯಿಯನ್ನು ನಾವಿಂದು ಯಾವುದೋ 'ವೃದ್ಧಾಶ್ರಮ' ಇಲ್ಲವೆ 'ಅನಾಥಾಲಯ'ಕ್ಕೆ ತಳ್ಳುವಂತಹ ಕಟುಕರಾಗುತ್ತಿದ್ದೇವೆ. ಒಂದೆಡೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರು ವಿಶ್ವದ ವಿವಿಧ ಹುದ್ದೆಗಳಲ್ಲಿ ಸಬಲೆಯರಂತೆ ತಾವು ಯಾವುದೇ ರೀತಿಯಲ್ಲಿ ಪುರುಷರಿಗೆ ಕಡಿಮೆಯಿಲ್ಲ ಎಂಬಂತೆ ರುಜುವಾತು ಮಾಡಿ ತೋರಿಸುತ್ತಿದ್ದಾರಾದರೂ ಇನ್ನೊಂದೆಡೆ ಸ್ತ್ರೀ ತುಂಬಾ ಅಬಲೆ ಹಾಗೂ ಮನೋರಂಜನೆಯ, ಮಾರಾಟದ ಗೊಂಬೆಯಾಗಿ ಪ್ರತಿಬಿಂಬಿಸುತ್ತಿದ್ದಾಳೆ. ಈ ವಿಪರ್ಯಾಸ ವಿಡಂಬನೆ ಜಗತ್ತಿನ ಕಟುಸತ್ಯವಾದರೂ ಸಹ ವಿಶ್ವದಾದ್ಯಂತ ಹೆಣ್ಣು ಮಕ್ಕಳ ಸಂಖ್ಯೆ ಕುಂಠಿತಗೊಳ್ಳುತ್ತಿರುವುದು, ಸ್ತ್ರೀ ಭ್ರೂಣಹತ್ಯೆ, ಮಹಿಳೆಯರ ಮೇಲೆ ನಡೆಯುವಂತಹ ಅತ್ಯಾಚಾರ, ದೌರ್ಜನ್ಯ, ಗ್ರಹಹಿಂಸೆ, ಕಾರ್ಯಾಲಯ, ಕಚೇರಿಗಳಲ್ಲಿ ನಡೆಯುವ ತಾರತಮ್ಯ, ಶೋಷಣೆ ಇವೆಲ್ಲವೂ ಎಲ್ಲೋ ಮನುಷ್ಯ ತನ್ನ ಮೂಲಭೂತವಾದ ಮಾತೃಶಕ್ತಿಯನ್ನೇ ಮರೆಯುತ್ತಿದ್ದಾನೋ ಎಂಬಂತಹ ವಾತಾವರಣವನ್ನು ಸೃಷ್ಟಿ ಮಾಡಿವೆ. ಅಂದಿನಿಂದ ಇಂದಿನವರೆಗೆ ಸ್ತ್ರೀಜಾತಿ ಒಂದು ಪ್ರತ್ಯೇಕ ಬಣವಾಗಿ ತನ್ನ ಅಸ್ತಿತ್ವಕ್ಕಾಗಿ ಹೋರಾಟವನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡಿದೆ.

ಪುರಾಣ, ಶಾಸ್ತ್ರ ಹಾಗೂ ಮಹಾಕಾವ್ಯಗಳಲ್ಲಿ ಸ್ತ್ರೀಯನ್ನು ಅದ್ಭುತ ಶಕ್ತಿಯನ್ನಾಗಿ ಪ್ರದರ್ಶಿಸಿ ಪೂಜಿಸುವ ನಮ್ಮ ಸಂಸ್ಕೃತಿ ನಿಜ ಜೀವನದಲ್ಲಿ ಹಳ್ಳಿ ಹಾಗೂ ನಗರಗಳಲ್ಲಿ ವಾಸವಾಗಿರುವ ಸಹಸ್ರಾರು ಮಹಿಳೆಯರನ್ನು ಒಂದಿಲ್ಲೊಂದು ರೀತಿಯಲ್ಲಿ ಶೋಷಿಸುತ್ತಲೇ ಬರುತ್ತಿದೆ. ಮನೆಗೆಲಸದಾಕೆ, ಹೊಲದಲ್ಲಿ ದುಡಿಯುವಾಕೆ, ಕಟ್ಟಡಗಳು, ರಸ್ತೆ, ರೈಲು ಹಳಿಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಮಹಿಳೆ, ಟೀ-ಕಾಫಿ-ರಬ್ಬರ್ ತೋಟಗಳಲ್ಲಿ ಗೈಯುವಾಕೆ, ಕಾರ್ಖಾನೆ, ಕಾರ್ಯಾಲಯ, ವ್ಯಾಪಾರೀ ಮಳಿಗೆಗಳಲ್ಲಿ ದುಡಿಯುವಾಕೆ ಹೀಗೆ ವಿವಿಧ ಸ್ತರಗಳಲ್ಲಿ ಸಂಸಾರದ ಆರ್ಥಿಕ ಸ್ಥಿತಿಯನ್ನು ಗಟ್ಟಿಮಾಡುವುದಕ್ಕೋಸ್ಕರ ಪುರುಷನಿಗೆ ಸರಿಸಾಟಿಯಾಗಿ ಭುಜಕ್ಕೆ ಭುಜ ಕೊಟ್ಟು ದುಡಿಯುತ್ತಿರುವ ಮಹಿಳೆಯರಿಗೆ ಸಮನಾದ ಸ್ಥಾನಮಾನಗಳಿಲ್ಲ, ಸಂಬಳ, ಸಂಭಾವನೆಗಳಿಲ್ಲ, ಗೌರವ, ಆದರಗಳಿಲ್ಲ. ಇದೆಲ್ಲಕ್ಕಿಂತ ಮಿಗಿಲಾಗಿ ಬಹಳಷ್ಟು ಸಂದರ್ಭಗಳಲ್ಲಿ ಮಹಿಳೆ ಸದಾ ಒಂದು ರೀತಿಯ ಭಯದ ವಾತಾವರಣದಲ್ಲಿ ಕೆಲಸ ಮಾಡಬೇಕಾಗುತ್ತದೆ. ತನ್ನ ದೈಹಿಕ ಸಂರಕ್ಷಣೆಯ ಜೊತೆಗೆ ಸಂಸಾರ ಹಾಗು ಸಮಾಜದ ಕಣ್ಣಿನಲ್ಲಿ ಸದಾ ತನ್ನ ಮಾನರಕ್ಷಣೆಯನ್ನೂ ಕೂಡಾ ಮಾಡಿಕೊಳ್ಳಬೇಕಾದದ್ದು ಮಹಿಳೆಯರಿಗಿರುವ ಅತ್ಯಂತ ದೊಡ್ಡ ಸವಾಲು. ದುಡಿಯುವ ಮಹಿಳೆ ಅಂದರೆ ಮನೆಯಿಂದ ಹೊರಗೆ ಹೋಗಿ ಆರ್ಥಿಕವಾಗಿ ಸಂಪಾದಿಸಿ ತನ್ನ ಕಾಲ ಮೇಲೆ ತಾನು ನಿಂತು ಸ್ವಾವಲಂಭಿಯಾಗಬೇಕೆಂದು ಬಯಸುವ ಎಲ್ಲ ಮಹಿಳೆಯರನ್ನು ಇಂದು ಸಮಾಜ ಒಂದು ರೀತಿಯ ವಕ್ರದೃಷ್ಟಿಯಿಂದ ಕಾಣುತ್ತಿದೆ. ಅದರಲ್ಲೂ ವಿಶೇಷವಾಗಿ ನಾಟಕ, ಸಿನೇಮಾ, ಟಿ.ವಿ. ಕಲಾವಿದರಾಗಿ ಪತ್ರಕರ್ತೆಯರಾಗಿ, ರಾಜಕಾರಣಿಗಳಾಗಿ ಮುಂಬರುವ ಮಹಿಳೆಯರನ್ನು ಇಂದಿಗೂ ಸಮಾಜ ಸ್ವಲ್ಪಮಟ್ಟಿಗೆ ಕೀಳರಿಮೆಯಿಂದಲೇ ನೋಡುತ್ತಿದೆ. ಈ ರೀತಿಯ ಡಬಲ್ ಸ್ಟ್ಯಾಂಡರ್ಡ್ (ಹೆಣ್ಣಿಗೊಂದು ನೀತಿ, ಗಂಡಿಗೊಂದು ನೀತಿ) ಎಲ್ಲಿಯವರೆಗೆ ಮುಂದುವರಿಯುತ್ತದೋ ಅಲ್ಲಿಯತನಕ ಮಹಿಳೆಯರು ಸ್ವತಂತ್ರವಾಗಿ ತಾವು ಪುರುಷರಷ್ಟೇ ಗೌರವಾನ್ವಿತರು ಮತ್ತು ಸರಿಸಮಾನರು ಎಂದು ಬಾಳುವುದು ಕಷ್ಟಸಾಧ್ಯ. ನಮ್ಮ ಇಂದಿನ ವಿದ್ಯಾಭ್ಯಾಸ ಪದ್ಧತಿ, ಶಾಲಾ ಕಾಲೇಜುಗಳಲ್ಲಿನ ನೀತಿ ನಿಯಮಗಳೂ ಕೂಡಾ ಪುರುಷರ ಪರವಾಗಿ ಇವೆಯೇ ಹೊರತು, ಸ್ತ್ರೀ ಪುರುಷರಿಗೆ ಸರಿಸಮಾನವಾಗಿಲ್ಲ. ಆದ್ದರಿಂದಲೇ ಮಹಿಳೆಯರು ಎಂತಹ ಉಡುಪನ್ನು ತೊಡಬೇಕು, ಮಂದಿರಗಳಿಗೆ ಪ್ರವೇಶ ಮಾಡಕೂಡದು, ಪೂಜೆ ಪುನಸ್ಕಾರಗಳಲ್ಲಿ ತೊಡಗಕೂಡದು ಎಂಬೆಲ್ಲಾ ಕೂಗುಗಳು ಆಗಾಗ್ಗೆ ಕೇಳಿಬರುತ್ತಿರುವುದು. ಜಗತ್ತು ಎಲ್ಲಾ ಮಾನವ ಜೀವಿಗಳಿಗೆ ಸರಿಸಮಾನವಾದ ಹಕ್ಕು ಬಾಧ್ಯತೆಗಳನ್ನು ಮಾನವೀಯ ಮೌಲ್ಯಗಳನ್ನು ನೀಡುವ ಮತ್ತು ಗೌರವಿಸುವ ಮಾತುಗಳನ್ನಾಡುತ್ತಿದೆಯಾದರೂ ಜಗತ್ತಿನ ಹಲವಾರು ದೇಶ ಪ್ರದೇಶಗಳಲ್ಲೆ ಇಂದಿಗೂ ಸ್ತ್ರೀ ಪುರುಷನಿಗಿಂತ ಕಡಿಮೆ ಎಂಬ ಒಂದು ಮನೋಭಾವನೆ ಎಲ್ಲ ವ್ಯವಹಾರಗಳಲ್ಲೂ ಎದ್ದು ಕಾಣುತ್ತಿದೆ.

ಜಗತ್ತಿನಾದ್ಯಂತ ಸ್ತ್ರೀಯರಿಗೆ ಸಂವಿಧಾನಾತ್ಮಕ ಹಕ್ಕುಗಳ ಜೊತೆಗೆ ಮನುಕುಲದ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಅಗತ್ಯವಾದ ಹಲವಾರು ವಿಶೇಷ ಹಕ್ಕುಗಳು ಮತ್ತು ಸವಲತ್ತುಗಳು ದೊರೆಯುವಂತೆ ನೋಡಿಕೊಳ್ಳದಿದ್ದಲ್ಲಿ ಸ್ತ್ರೀಶಕ್ತಿ ಅಂದರೆ ತಾಯಿ ಇಲ್ಲದ ಅನಾಥ ಜಗತ್ತನ್ನು ನಾವು ಮುಂದೆ ಎದುರಿಸಬೇಕಾದೀತು. ಹೆಣ್ಣು ಮಕ್ಕಳಿಗಾಗಿ ವಿಶೇಷ ಶಾಲೆ, ಕಾಲೇಜುಗಳು, ಉದ್ಯೋಗವಕಾಶಗಳು ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಸರ್ಕಾರ, ಸಂಘ ಸಂಸ್ಥೆಗಳು ಮತ್ತು ಸಮಾಜ ಮುಂದೆ ಬರಬೇಕು. ಸ್ತ್ರೀಯನ್ನು ಕೇವಲ ಒಂದು ಹೆರುವ ಯಂತ್ರ ಎಂದು ಪರಿಗಣಿಸದೆ ನಮ್ಮ ಪುರಾಣ ಶಾಸ್ತ್ರಗಳಲ್ಲಿ ತಿಳಿಸಿದಂತೆ ಆಕೆ ಇಡೀ ಮನುಕುಲದ ಅರ್ಧಾಂಶ. ಸ್ತ್ರೀಯ ಹೊರತಾಗಿ ಪುರುಷ ಅಪರಿಪೂರ್ಣ, ಸ್ತ್ರೀ ಪುರುಷರಿಬ್ಬರೂ ಒಂದೇ ರಥದ ಚಕ್ರಗಳು, ಒಂದೇ ನಾಣ್ಯದ ಎರಡು ಮುಖಗಳು ಎಂಬ ನಿಟ್ಟಿನಲ್ಲಿ ನಾವೆಲ್ಲರೂ ಮುನ್ನಡೆದಾಗ ಸಮಾಜದಲ್ಲಿ ಇಂದು ನಡೆಯುತ್ತಿರುವ ಸ್ತ್ರೀಪುರಷರ ನಡುವಿನ ಅರ್ಥಹೀನ ಪೈಪೋಟಿ ಕೊನೆಗೊಂಡು ಇಡೀ ಮನುಕುಲವೇ ಶ್ರೇಯಸ್ಸಿನತ್ತ ಮುನ್ನಡೆಯಬಹುದಾಗಿದೆ. ಅ

*ಸಖಾರಾಮ ಉಪ್ಪೂರು*

**ಏಪ್ರಿಲ್ 2 ಮತ್ತು 3ರಂದು ವಾರ್ಷಿಕೋತ್ಸವದ ಅಂಗವಾಗಿ ಸಾಂಸ್ಕೃತಿಕ ಸ್ಪರ್ಧೆಗಳು**

1. **ಸಂಗೀತ ಸ್ಪರ್ಧೆ :** ಭಾವಗೀತೆ, ಭಕ್ತಿಗೀತೆ, ಚಲನ ಚಿತ್ರಗೀತೆ, ಜಾನಪದ ಗೀತೆ–ವಯಸ್ಕರು (18ವರ್ಷಕ್ಕಿಂತ ಮೇಲ್ಪಟ್ಟವರು) ಮತ್ತು ಮಕ್ಕಳು (10–18ವರ್ಷ)
2. **ರಂಗೋಲಿ ಸ್ಪರ್ಧೆ :** ಮಹಿಳೆಯರು (18ವರ್ಷಕ್ಕಿಂತ ಮೇಲ್ಪಟ್ಟವರು)
3. **ನೃತ್ಯ ಸ್ಪರ್ಧೆ :** ಜಾನಪದ ನೃತ್ಯ, ಕ್ಲಾಸಿಕಲ್ ನೃತ್ಯ ಮತ್ತು ಮೋಡರ್ನ್ ಡಾನ್ಸ್ – ಮಕ್ಕಳು–10 ವರ್ಷಕ್ಕಿಂತ ಕೆಳಗಿನವರು, ಯುವಕರು –10–30 ವರ್ಷ, ವಯಸ್ಕರು–30ವರ್ಷಕ್ಕಿಂತ ಮೇಲ್ಪಟ್ಟವರು
4. **ಚಿತ್ರ ಸ್ಪರ್ಧೆ :** ಮಕ್ಕಳು–10 ವರ್ಷಕ್ಕಿಂತ ಕೆಳಗಿನವರು ಮತ್ತು ಸೀನಿಯರ್–10–18 ವರ್ಷ
5. **ಭಾಷಣ ಮತ್ತು ಆಶುಭಾಷಣ ಸ್ಪರ್ಧೆ :** ಮಕ್ಕಳು –10–18ವರ್ಷ ಮತ್ತು 18 ವರ್ಷಕ್ಕಿಂತ ಮೇಲ್ಪಟ್ಟವರು
6. **ಪಕ್ಕವಾದ್ಯಗಳು (Instrumental) :** ಮಕ್ಕಳು –10–18ವರ್ಷ ಮತ್ತು 18 ವರ್ಷಕ್ಕಿಂತ ಮೇಲ್ಪಟ್ಟವರು
7. **ಏಕ ಪಾತ್ರಾಭಿನಯ :** ಮಕ್ಕಳು–10–18ವರ್ಷ ಮತ್ತು 18 ವರ್ಷಕ್ಕಿಂತ ಮೇಲ್ಪಟ್ಟವರು
8. **ಹಾಸ್ಯ (Comedy) :** ಮಕ್ಕಳು–10–18ವರ್ಷ ಮತ್ತು 18 ವರ್ಷಕ್ಕಿಂತ ಮೇಲ್ಪಟ್ಟವರು
9. **ಸ್ಕಿಟ್ (Skit) :** ಮಕ್ಕಳು–10–18ವರ್ಷ ಮತ್ತು 18 ವರ್ಷಕ್ಕಿಂತ ಮೇಲ್ಪಟ್ಟವರು
10. **ಮಿಮಿಕ್ರಿ :** ಮಕ್ಕಳು –10–18ವರ್ಷ ಮತ್ತು 18 ವರ್ಷಕ್ಕಿಂತ ಮೇಲ್ಪಟ್ಟವರು
11. **ಸ್ಮರಣ ಶಕ್ತಿ ಸ್ಪರ್ಧೆ :** ಮಕ್ಕಳು 7–10 ವರ್ಷ ಮತ್ತು 10–14 ವರ್ಷ
12. **ಕನ್ನಡ–ಮಕ್ಕಳ ಪದ್ಯಗಳು :** ಮಕ್ಕಳು 6 ವರ್ಷಕ್ಕಿಂತ ಕೆಳಗಿನವರು
13. **ಛದ್ಮವೇಷ :** ಮಕ್ಕಳು 6 ವರ್ಷಕ್ಕಿಂತ ಕೆಳಗಿನವರು
14. **ಪದ್ಯವಾಚನ ಮತ್ತು ಗದ್ಯವಾಚನ :** ಮಕ್ಕಳು 7–10 ವರ್ಷ

ಅರ್ಜಿಗಳನ್ನು ಮಾರ್ಚ್ 21ರ ಒಳಗಾಗಿ ಸಂಘದ ಕಛೇರಿಯಲ್ಲಿ ಸಲ್ಲಿಸತಕ್ಕದ್ದು. ಪ್ರವೇಶ ಶುಲ್ಕ ರೂ. 30/–

## ಸೂಚನೆ

ದೆಹಲಿ ಕರ್ನಾಟಕ ಸಂಘವು ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲು ಉದ್ದೇಶಿಸಿದ್ದು ಗದ್ಯವಾಚನ ಮತ್ತು ಪದ್ಯವಾಚನಗಳಲ್ಲಿ ಭಾಗವಹಿಸಲು ಇಚ್ಛಿಸುವವರಿಗೆ ಈ ಕೆಳಕಂಡ ಸೂಚನೆಗಳನ್ನು ಅನುಸರಿಸಲು ಕೋರಲಾಗಿದೆ:

1. ಪದ್ಯವಾಚನ ಸ್ಪರ್ಧೆಯಲ್ಲಿ ಭಾಗವಹಿಸುವ ಮಕ್ಕಳು ತಮಗಿಷ್ಟವಿರುವ ಯಾವುದಾದರೂ ಒಂದು ಪದ್ಯವನ್ನು ವಾಚನ ಮಾಡಬಹುದು ಉದಾ:– ಶಿವಶರಣರ ವಚನಗಳು, ಹರಿದಾಸರ ಕೀರ್ತನೆಗಳು, ಆಧುನಿಕ ಕನ್ನಡ ಕವಿಗಳ ಪದ್ಯಗಳನ್ನು ವಾಚನ ಮಾಡಬಹುದು. ನೀವು ವಾಚನ ಮಾಡಬಯಸುವ ಪದ್ಯದ ಲಿಖಿತ ಪ್ರತಿಯನ್ನು ಒಂದು ವಾರ ಮುಂಚಿತವಾಗಿ ಸಂಘದ ಕಛೇರಿಗೆ ಸಲ್ಲಿಸಬೇಕು. (ಪದ್ಯಗಳನ್ನು ನೋಡಿಕೊಂಡು ಓದಲು ಅವಕಾಶವಿರುವುದಿಲ್ಲ. ಕಂಠಪಾಠ ಮಾಡಿ ವಾಚನ ಮಾಡುವವರಿಗೆ ಮಾತ್ರ ಅವಕಾಶ). ಅವಕಾಶ ಎರಡು ನಿಮಿಷ ಮಾತ್ರ

2. ಗದ್ಯವಾಚನ ಸ್ಪರ್ಧೆಯಲ್ಲಿ ಭಾಗವಹಿಸುವ ಮಕ್ಕಳು ತಮಗಿಷ್ಟವಿರುವ ಯಾವುದಾದರೂ ಒಂದು ಗದ್ಯವನ್ನು ವಾಚನ ಮಾಡಬಹುದು. ಉದಾ: ಕನ್ನಡ ಭಾಷೆ, ಸಂಸ್ಕೃತಿ, ಇತಿಹಾಸಕ್ಕೆ ಸಂಬಂಧಿಸಿದಂತೆ 50 ರಿಂದ 75 ಪದಗಳಿಗೆ ಮೀರದಂತೆ ನೀವೆ ಬರೆದ ಒಂದು ಪಠ್ಯವನ್ನು ನೋಡಿಕೊಂಡು ವಾಚನ ಮಾಡಬಹುದು. ನೀವು ವಾಚನ ಮಾಡಬಯಸುವ ಗದ್ಯದ ಲಿಖಿತ ಪ್ರತಿಯನ್ನು ಒಂದು ವಾರ ಮುಂಚಿತವಾಗಿ ಸಂಘದ ಕಛೇರಿಗೆ ಸಲ್ಲಿಸಬೇಕು.ಅವಕಾಶ ಎರಡು ನಿಮಿಷ ಮಾತ್ರ


**Statement of Ownership and other Particulars about**
**Delhi Karnataka Sangha's ABHIMATA**
**FORM-IV (See Rule 8)**

| | | |
|---|---|---|
| **Place of Publication** | : | Delhi Karnataka Sangha, New Delhi |
| **Periodicity of Pub** | : | Monthly |
| **Printers Name** | : | M/s Saujanya Printing Press, C-95, Okhla Industrial Area, Phase-I, New Delhi-110020 |
| **Publishers Name** | : | C.M. Nagaraja |
| **Nationality** | : | Indian |
| **Address** | : | Delhi Karnataka Sangha Rao Tularam Marg, Sector-12, R.K. Puram, New Delhi - 22 |
| **Editor's Name** | : | Balakrishna Naik D |
| **Nationality** | : | Indian |
| **Address** | : | As Above |
| **Name & Address** of Individual who own the News Paper | : | Delhi Karnataka Sangha Rao Tularam Marg, Sector-12 R.K. Puram, New Delhi- 110022 |

I, C.M. Nagaraja, hereby declare that the particulars given above are true to the best of my knowledge and belief.

**09.03.2016** **Sd\-**
**New Delhi** **Publisher**


## ದೆಹಲಿ ಕರ್ನಾಟಕ ಸಂಘದಿಂದ ಕನ್ನಡ ಕೃತಿಗಳ ಪ್ರಕಟಣೆ

ದೇಶದ ರಾಜಧಾನಿ ದೆಹಲಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಮತ್ತು ಕಲೆ ಇವುಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ದೆಹಲಿ ಕರ್ನಾಟಕ ಸಂಘ ಕಳೆದ ಹಲವಾರು ದಶಕಗಳಿಂದ ಕೆಲಸ ಮಾಡುತ್ತ ಬಂದಿದೆ. ಈಗಾಗಲೇ ಹಲವಾರು ಹೊರನಾಡ ಕನ್ನಡಿಗರ ಉತ್ತಮ ಕೃತಿಗಳನ್ನು ಪ್ರಕಟಿಸಿರುವ ದೆಹಲಿ ಕರ್ನಾಟಕ ಸಂಘವು ಈ ಪರಂಪರೆಯನ್ನು ಮುಂದುವರಿಸುವ ದಿಸೆಯಲ್ಲಿ ಕನ್ನಡದ ಉತ್ತಮ ಸಾಹಿತ್ಯ ಕೃತಿಗಳನ್ನು ಈ ಮೂಲಕ ಪ್ರಕಟಣೆಗಾಗಿ ಸಂಘವು ಹೊರನಾಡ ಕನ್ನಡ ಬರಹಗಾರರಿಂದ ಆಹ್ವಾನಿಸುತ್ತಿದೆ. ಪ್ರಕಟಣೆಗೆ ಬರಲಿರುವ ಕೃತಿಗಳ ಆಯ್ಕೆಗಾಗಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಹೊಸ ಬರಹಗಾರರಿಗೆ ಆದ್ಯತೆ ನೀಡಲಾಗುವುದು.

ಆಸಕ್ತರು ಈ ಕೆಳಗಿನ ವಿಳಾಸಕ್ಕೆ ತಮ್ಮ ಕೃತಿಗಳನ್ನು ಕಳುಹಿಸಿಕೊಡಬಹುದು.

ಸಿ.ಎಂ.ನಾಗರಾಜ
ಪ್ರಧಾನ ಕಾರ್ಯದರ್ಶಿ
ದೆಹಲಿ ಕರ್ನಾಟಕ ಸಂಘ, ಸೆಕ್ಟರ್–12, ಆರ್.ಕೆ.ಪುರಂ
ನವದೆಹಲಿ–110 022,
ದೂರವಾಣಿ : 011–26109615/26104818





# ಗೋಕರ್ಣ ಮಂಡಲದ ಮೊಬೈಲ್ ಆಪ್

ಗೋಕರ್ಣ ಮಂಡಲದ ಸದಸ್ಯರ ಐಸ್ ಕ್ರೀಂ ಇವಿನಿಂಗ್ ಮತ್ತು ಮಂಡಲದ ಮೊಬೈಲ್ ಆಪ್ ಉದ್ಘಾಟನಾ ಸಮಾರಂಭವು ನವದೆಹಲಿಯ ಚಾಣಕ್ಯಪುರಿಯಲ್ಲಿರುವ ನೆಹರು ಪಾರ್ಕ್‌ನಲ್ಲಿ ಇದೇ ಫೆಬ್ರವರಿ 7ರಂದು ನಡೆಯಿತು.

ಮಂಡಲದ ಹಿರಿಯ ಸದಸ್ಯ ಶ್ರೀ ಶ್ರೀರಾಮ ಹೆಗ್ಡೆಯವರು ಮಂಡಲದ ಮೊಬೈಲ್ ಅಪ್ಲಿಕೇಶನ್ ಅನ್ನು ಲೋಕಾರ್ಪಣೆ ಮಾಡಿ ಮೊಬೈಲ್ ಅಪ್ಲಿಕೇಶನ್‌ನಿಂದ ಏನೇನು ಲಾಭ ಇದೆ ಎಂದು ವಿವರಿಸಿದರು. ಗೋಕರ್ಣ ಮಂಡಲದ ಉಪಾಧ್ಯಕ್ಷ ಶ್ರೀ ಆದಿತ್ಯ ನಾರಾಯಣ ಅವರು ಮೊಬೈಲ್ ಅಪ್ಲಿಕೇಶನ್‌ನಲ್ಲಿ ಇರುವ ವೈಶಿಷ್ಟ್ಯದ ಬಗ್ಗೆ ವಿವರಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅಧ್ಯಕ್ಷ ಶ್ರೀ ನಾರಾಯಣ ಭಟ್ ಅವರು ಗೋಕರ್ಣ ಮಂಡಲದ ಹಿಂದಿನ ಕಾರ್ಯಕ್ರಮದ ಬಗ್ಗೆ ವಿವರವನ್ನು ನೀಡಿದರು. ಅಂತೆಯೇ ಮಂಡಲದ ಮುಂದಿನ ಸಮಾರಂಭದ ಬಗ್ಗೆ ಸರ್ವ ಸದಸ್ಯರಿಗೆ ತಿಳಿಸಲಾಯಿತು.

ಕೊನೆಯಲ್ಲಿ ಮಾತನಾಡಿದ ಸಂಘದ ಕಾರ್ಯದರ್ಶಿ ಶ್ರೀ ಮುರಳಿ ಕೃಷ್ಣ ರವರು ಸಂಘದ ಸದಸ್ಯರಾದ ಶ್ರೀ ಸುಬ್ರಮಣ್ಯ ಪ್ರಸಾದ್ ಅವರ ಆರೋಗ್ಯ ಸಮಸ್ಯೆಯ ಬಗ್ಗೆ ಸರ್ವ ಸದಸ್ಯರಿಗೆ ತಿಳಿಸಿ ಅವರ ಆರೋಗ್ಯ ಸುಧಾರಣೆಗೆ ಪ್ರಾರ್ಥಿಸಿದರು. ಸಭೆಯನ್ನು ಆದಿತ್ಯ ನಾರಾಯಣ ನಿರೂಪಿಸಿ ಗೌತಮ್ ಹೆಗ್ಡೆಯವರು ವಂದನಾರ್ಪಣೆಯನ್ನು ಸಲ್ಲಿಸಿದರು. ಕಾರ್ಯಕ್ರಮವನ್ನು ಕಾರ್ಯಕಾರಿ ಸದಸ್ಯರಾದ ಶ್ರೀ ಶಿವರಾಮ ಶಾಸ್ತ್ರಿ, ಶ್ರೀ ಕಾಶಿನಾಥ್ ಗೋಕರ್ಣೆ, ಶ್ರೀ ವಿಜಯ ನಾರಾಯಣ ಶಾಂತಿಮೂಲೆ ಮತ್ತು ಡಾ. ಶ್ಯಾಮ್ ಪ್ರಸಾದ್ ಅವರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಸುಮಾರು 65 ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಂಡಲದ ಸಹಕಾರ್ಯದರ್ಶಿ ಶ್ರೀ ಶ್ಯಾಮ್ ಭಟ್ ಅವರು ಸಂಘದ ಹೊಸ ಸದಸ್ಯರನ್ನು ಪರಿಚಯಿಸಿ ಅವರನ್ನು ಗೋಕರ್ಣ ಮಂಡಲಕ್ಕೆ ಸ್ವಾಗತಿಸಿದರು. ಅ

**ಕ್ಯಾಪ್ಟನ್ ಆದಿತ್ಯ**

# ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನಿಂದ ವನವಿಹಾರ



ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನಿಂದ ಪ್ರತಿ ವರ್ಷದಂತೆ ಈ ಬಾರಿಯು ವನವಿಹಾರವನ್ನು ಲೋದಿ ಗಾರ್ಡನ್‌ನಲ್ಲಿ ಏರ್ಪಡಿಲಾಗಿತ್ತು.

ಅಧ್ಯಕ್ಷೆ ಶ್ರೀಮತಿ ರಾಧಾ ಕೌಜಲಗಿಯವರು ಎಲ್ಲರಿಗೂ ಸ್ವಾಗತ ಕೋರಿದರು. ಆಟೋಟಗಳನ್ನು ಏರ್ಪಡಿಸಲಾಗಿತ್ತು. ಖಜಾಂಚಿ ಜಯಾ ಆಚಾರ್ಯ ಅವರು ಉತ್ತಮವಾದ ಆಟಗಳನ್ನು ಸದಸ್ಯೆಯರಿಗೆ ಆಡಿಸಿದರು. ತಾಳ್ಮೆ ಮತ್ತು ಏಕಾಗ್ರತೆಯಿಂದ ಆಟಗಳನ್ನು ಆಡುವಂತಿದ್ದ ಸದಸ್ಯೆಯರೆಲ್ಲರಿಗೂ ಖುಷಿಯಾಯಿತಲ್ಲದೆ ಮಹಿಳಾ ಮಣಿಗಳ ಮಾತು ಕಮ್ಮಿ ಮಾಡಿತ್ತು. ಅಂತರರಾಷ್ಟ್ರೀಯ ಮಹಿಳಾ ದಿವಸವನ್ನು ಆಚರಿಸಲಾಗುವುದೆಂದು ಸದಸ್ಯರಿಗೆ ತಿಳಿಸಲಾಯಿತು. ಆಸಕ್ತರು ಹೆಸರು ನೀಡಬಹುದೆಂದು ತಿಳಿಸಲಾಯಿತು. ಎಲ್ಲರ ನೆಚ್ಚಿನ ಹೌಸಿ ಹೌಸಿ ಆಡುವುದರೊಂದಿಗೆ ದಿನ ಸಂತೋಷದಿಂದ ಕಳೆಯಿತು. ಆಟೋಟಗಳಲ್ಲಿ ಗೆದ್ದ ಸದಸ್ಯೆಯರಿಗೆ ಬಹುಮಾನ ವಿತರಿಸಲಾಯಿತು. ಮಾರ್ಚ್ 20ರಂದು ಆಹಾರ ಮೇಳದಲ್ಲಿ ಹೆಚ್ಚು ಮಹಿಳೆಯರು ಭಾಗವಹಿಸುವಂತೆ ಮತ್ತು ಮಾಸಿಕ ಸಭೆಗೆ ಹಾಜರಾಗುವಂತೆ ಸದಸ್ಯೆಯರಿಗೆ ತಿಳಿಸಲಾಯಿತು. ಅ

**ಎಸ್.ಸಿ. ಹೇಮಲತ**



## ಮನು ಬಳಿಗಾರ್ ಕನ್ನಡ ಸಾಹಿತ್ಯ ಪರಿಷತ್ ನೂತನ ಅಧ್ಯಕ್ಷರು

ನಿವೃತ್ತ ಐಎಎಸ್ ಅಧಿಕಾರಿ ಮನು ಬಳಿಗಾರ್ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮನು ಬಳಿಗಾರ್ ಸೇರಿದಂತೆ 15 ಅಭ್ಯರ್ಥಿಗಳು ಅಧ್ಯಕ್ಷ ಹುದ್ದೆಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಮನು ಬಳಿಗಾರ್ ಶತಮಾನೋತ್ಸವದ ಸಂಭ್ರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ 25ನೇ ಅಧ್ಯಕ್ಷರು. ಪರಿಷತ್ತು ಮತ್ತು ಜಿಲ್ಲಾಧ್ಯಕ್ಷರ ಅಧಿಕಾರಾವಧಿ 5 ವರ್ಷಗಳು.

ಮನು ಬಳಿಗಾರ್ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾಗಿದ್ದಾಗ ದೆಹಲಿ ಕರ್ನಾಟಕ ಸಂಘಕ್ಕೆ ಉತ್ತಮ ಸಹಾಯ ಸಹಕಾರ ನೀಡಿ ಪ್ರೋತ್ಸಾಹಿಸಿದ್ದರು. ಅ

## ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಜಾನಪದ ವಿದ್ವಾಂಸ ಪ್ರಶಸ್ತಿ



ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರು ಮತ್ತು ಪ್ರಸ್ತುತ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ "ಬನ್ನಂಜೆ ಬಾಬು ಅಮೀನ್ ಜಾನಪದ ವಿದ್ವಾಂಸ ಪ್ರಶಸ್ತಿ"ಯು ಲಭಿಸಿದೆ. ಕೆಮ್ಮಲಜೆ ಜಾನಪದ ಪ್ರಕಾಶನದ ಅಧ್ಯಕ್ಷ ಡಾ. ಗಣನಾಥ ಎಕ್ಕಾರು ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕರ್ನಾಟಕ ಮುಖ್ಯಮಂತ್ರಿಯ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್ ಮಟ್ಟು ಅವರು ಡಾ. ಬಿಳಿಮಲೆ ಅವರಿಗೆ ಪ್ರಶಸ್ತಿ ಪ್ರದಾನವನ್ನು ಉಡುಪಿಯಲ್ಲಿ ಇದೇ ಫೆಬ್ರವರಿ 27ರಂದು ಮಾಡಿದರು. ಕಲಾವಿದ ಪ್ರಶಸ್ತಿಯನ್ನು ಡೋಲು ಕಲಾವಿದ ಗುರುವ ಅವರಿಗೆ ಪ್ರದಾನ ಮಾಡಲಾಯಿತು. ಅ



## ನಾ.ದಾ. ಶೆಟ್ಟಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ

ಕೇಂದ್ರ ಸಾಹಿತ್ಯ ಅಕಾಡೆಮಿಯು ನೀಡುವ 2015ರ ಸಾಲಿನ 'ಅನುವಾದ ಪ್ರಶಸ್ತಿ'ಗೆ ಕರಾವಳಿಯ ಹಿರಿಯ ಸಾಹಿತಿ ನಾ. ದಾಮೋದರ ಶೆಟ್ಟಿ ಆಯ್ಕೆಯಾಗಿದ್ದಾರೆ. ಅವರು ಮಲಯಾಳದಿಂದ ಕನ್ನಡಕ್ಕೆ ಅನುವಾದಿಸಿದ 'ಕೊಚರೇತಿ' ಕಾದಂಬರಿಯು ಅತ್ಯುತ್ತಮ ಅನುವಾದ ಪ್ರಶಸ್ತಿಗೆ ಪಾತ್ರವಾಗಿದೆ. ಪ್ರಶಸ್ತಿಯು 50,000/–ರೂ. ನಗದು ಹಾಗೂ ಪ್ರಶಸ್ತಿ ಫಲಕಗಳನ್ನು ಒಳಗೊಂಡಿದ್ದು, ಪ್ರಶಸ್ತಿ ಪ್ರದಾನ ಸಮಾರಂಭವು ನವದೆಹಲಿಯಲ್ಲಿ ನಡೆಯಲಿದೆ. ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಚಟುವಟಿಕೆಗಳಲ್ಲಿ ನಿರಂತರ ತೊಡಗಿಸಿಕೊಂಡಿದ್ದ ನಾ.ದಾಮೋದರ ಅವರು ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು. ಅ

## ಕವನ

### ಗಣಪ - ಸಂಜ್ಞೆ

ದೊಡ್ಡ ತಲೆಯ ಗಣಪ ನೀನು
ದೊಡ್ಡದನ್ನೇ ಯೋಚಿಸುವೆ
ವಿಶಾಲ ಕಿವಿಯ ಗಣಪ ನೀನು
ಕುಶಲದಿ ಎಲ್ಲಾ ಆಲಿಸುವೆ
ಸಣ್ಣ ಕಣ್ಣಿನ ಗಣಪ ನೀನು
ಮನವ ಕೇಂದ್ರೀಕರಿಸುವೆ
ಏಕದಂತ ಗಣಪ ನೀನು
ಒಳಿತನ್ನಿಟ್ಟು ಕೆಡುಕನ್ನಟ್ಟುವೆ
ಉದ್ದ ಸೊಂಡಿಲ ಗಣಪ ನೀನು
ಸಮನ್ವಯ ಶಕ್ತಿಯ ನೀಡುವೆ
ಪರಶು ಹಿಡಿದ ಗಣಪ ನೀನು
ಹರುಸುತ ಬಂದವ ಬಿಡಿಸುವೆ
ಹಗ್ಗ ಹಿಡಿದ ಗಣಪ ನೀನು
ಜಗ್ಗಿ ಗುರಿಯೆಡೆ ಎಳೆಯುವೆ
ಚಿಕ್ಕ ಬಾಯಿಯ ಗಣಪ ನೀನು
ಮಾತು ಕಮ್ಮಿ ಆಡುವೆ
ಅಭಯ ಹಸ್ತ ಗಣಪ ನೀನು
ಉಭಯ ಜಗದಿ ರಕ್ಷಿಸುವೆ
ದೊಡ್ಡ ಹೊಟ್ಟೆ ಗಣಪ ನೀನು
ಕೆಡುಕೊಳಿತೆಲ್ಲಾ ಕರಗಿಸುವೆ
ಮೋದಕ ತಿಂಬ ಗಣಪ ನೀನು
ಸಾಧನೆಗೀಯುವೆ ಬಹುಮಾನ
ಮೂಷಿಕ ವಾಹನ ಗಣಪ ನೀನು
ಆಸೆಯ ಕಾಲಡಿ ಇಡುವವನು
ನೈವೇದ್ಯವ ಉಂಬಾ ಗಣಪ ನೀನು
ಸಮರ್ಪಣೆ ನಿನ್ನಡಿ ಗೈಯುವೆನು

*ಸರವು ಕೃಷ್ಣ ಭಟ್ಟ*

## ಗೌರವ ಡಾಕ್ಟರೇಟ್



ಲಲಿತಾ ಶ್ರೀನಿವಾಸ್ ಗೌಡ



ಸಿ.ಕೆ. ಮೂರ್ತಿ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರುಗಳಾದ, ಬೆಂಗಳೂರಿನಲ್ಲಿ ನೆಲೆಸಿರುವ ಶ್ರೀಮತಿ ಲಲಿತಾ ಶ್ರೀನಿವಾಸ್ ಗೌಡ ಮತ್ತು ಶ್ರೀ ಸಿ.ಕೆ.ಮೂರ್ತಿ ಅವರು ಸಮಾಜ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಿ ಅವರಿಗೆ ಯೋಗಾ ಸಂಸ್ಕೃತಂ ಯುನಿವರ್ಸಿಟಿ ಫ್ಲೋರಿಡಾ (ಅಮೇರಿಕ) ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

# ಕರ್ಮ-ವಿಶ್ವಕರ್ಮ-ಕಲೆ

ಭಾಷಾಜ್ಞಾನ ಪಡೆಯುವ ಮೊದಲು ಮಾನವನು ತನ್ನ ಅಂತರಂಗದ ಅನುಭವ ವ್ಯಕ್ತಗೊಳಿಸಲು ಪ್ರಯತ್ನಿಸಿದ ಅಭಿನಯವೇ ನಾಟ್ಯ ನರ್ತನ ಕಲೆಯಾಗಿ, ನಾಟಕ ಕಲೆಯಾಗಿ ಅಗಾಧವಾಗಿ ಬೆಳೆದಿದೆ. ಅದೇ ಇಂದು ಚಲನಚಿತ್ರ, ದೂರದರ್ಶನಗಳ ಮೂಲಕ ಜನರ ಮನವನ್ನು ಸೂರೆಗೊಂಡಿದೆ. ಹಾಗೆಯೇ ಮಾತಿನಲ್ಲಿ ಚತುರನಾಗಿರುವವನು ಭಾಷಣಕಾರನೂ ಅಹುದು; ವಕೀಲ, ರಾಜಕಾರಣಿಯೂ ಅಹುದು; ಬರೆಯ ಬಲ್ಲವನು ಸಾಹಿತಿಯೂ ಆಗಬಹುದು.

ಕುಟಿಗನು ಕಲ್ಲು ಕುಟ್ಟಿದಾಗ ಅದು ಪುಡಿಯಾಗುತ್ತೆ, ಅದೇ ಕಲ್ಲು ಚತುರ ಶಿಲ್ಪಿಯ ಕೈ ಚಳಕದಿಂದ ಸುಂದರವಾಗಿ ಕಲಾಕೃತಿಯಾಗಿ, ವಿಗ್ರಹವಾಗಿ, ಆರಾಧ್ಯ ಮೂರ್ತಿಯಾಗುತ್ತದೆ. ಲೋಹದಿಂದ ದಿನ ಬಳಕೆಯ ಪಾತ್ರೆ, ಪಡಗಗಳನ್ನು ಮಾಡಬಹುದು. ವಿಗ್ರಹಗಳನ್ನು ತಯಾರಿಸಬಹುದು. ಆಭರಣಗಳನ್ನು ಮಾಡಬಹುದು. ಇಂತಹ ಕ್ರಿಯೆಗಳಿಂದ ಅಂತರಂಗ ಬಹಿರಂಗ ಎರಡೂ ಶುದ್ಧಿಯಾಗುತ್ತವೆ.

ಈ ವಿಶಿಷ್ಟವಾದ ಕಲಾಜ್ಞಾನ ಮಾನವನಿಗೆ ಮಾತ್ರ ಮೀಸಲು. ಕಲೆಗೂ–ಮಾನವನಿಗೂ ಇರುವ ಈ ನಿಕಟ ಸಂಬಂಧ ಸಹಜವಾದದ್ದು, ಕಲಾವಿದನಾದ ಪ್ರತಿ ಒಬ್ಬ ಮಾನವನೂ ವಿಶ್ವಕರ್ಮನೇ ಆಗಿರುತ್ತಾನೆ. ವಿಶ್ವದ ಮತ್ತು ಕರ್ಮದ ಅನುಶಾಸಕನಾಗಿರುತ್ತಾನೆ. ಏಕೆಂದರೆ ಕಲೆಯು ಒಂದು ತಪಸ್ಸು. ಅದನ್ನು ಏಕಾಗ್ರತೆಯಿಂದ ಮಾತ್ರ ಸಾಧಿಸಬೇಕಾಗಿದೆ. ಕಲಾವಿದನ ಮನಸ್ಸು ಪ್ರಾಪಂಚಿಕವಾದ ಯಾವುದೇ ಕ್ಷುಲ್ಲಕ ವಿಚಾರಗಳಿಗೂ ಸ್ಪಂದಿಸುವುದಿಲ್ಲ–ಅಂದರೆ ತನ್ನ ಕರ್ಮದಲ್ಲಿ–ಕಲೆಯಲ್ಲಿ ಲೀನವಾಗುತ್ತದೆ.

ವಿಶ್ವಭಾಷೆಗಳು ಎನಿಸಿದ ಸಂಗೀತ, ಸಾಹಿತ್ಯ, ನೃತ್ಯ ಅಭಿನಯ ಚಿತ್ರ ಮತ್ತು ಶಿಲ್ಪಗಳ ಮೂಲಕ ತನ್ನ ಅನುಭವವನ್ನು ಕಲಾತ್ಮಕವಾಗಿ, ಸುಂದರವಾಗಿ, ಸಾಹಿತ್ಯ, ಚಿತ್ರಶಿಲ್ಪ, ನೃತ್ಯ, ಗಾನಗಳ ಮುಖಾಂತರ ಅಭಿವ್ಯಕ್ತಗೊಳಿಸಿ ಪ್ರಕಟಿಸುವ ಸಕಲ ಕಲೆಗಳಿಗೆ ಸರ್ವಶಕ್ತ ವಿಶ್ವಕರ್ಮನೇ ಆಧಾರ ಎಂಬುದು ಸತ್ಯ! ಈ ವಿಶ್ವಕರ್ಮನನ್ನೇ ಜಗತ್ತಿನ ಸಾವಿರಾರು ಧರ್ಮಗಳು, ಸಾವಿರಾರು ಹೆಸರುಗಳಿಂದ ಹಾಡಿ ಹೊಗಳುತ್ತವೆ. ಈ ವಿಶ್ವಕರ್ಮನೇ ಏಕನು ಅನೇಕನಾಗಲು, ಅನೇಕವು–ಏಕವಾಗಲು ಮನಸ್ಸು ಮಾಡಿದಾಗ ಎಲ್ಲಾ ರೂಪಗಳಲ್ಲಿಯೂ ಪ್ರಕಟವಾಗುತ್ತಾನೆ. 'ಅವರವರ ಭಾವಕ್ಕೆ ಅವರವರ ವೇಷದಲಿ' ಎಂಬ ಕವಿವಾಣಿಯನ್ನು ಇಲ್ಲಿ ಸ್ಮರಿಸಬೇಕು.



ವಿಶ್ವಕರ್ಮನು ಕಲೆಯ ರೂಪದಲ್ಲಿ ಗೋಚರಿಸುತ್ತಾನೆ. ಕಲೆಯು ತ್ಯಾಗ ಶೀಲವಾದುದು. ತ್ಯಾಗದಿಂದಲೇ ಅಮೃತ–ತತ್ವ ಉಂಟಾಗುತ್ತದೆ ಎಂಬುದನ್ನು ಅರಿತವನು ಕಲೆಯ ಮೂಲಕ ಪುಣ್ಯತ್ವವನ್ನು ಪಡೆದು ವಿಶ್ವಕರ್ಮನಾಗುತ್ತಾನೆ.

'ಅಮೃತಂ ಸಕಲೋ ಧರ್ಮ
ಸಧರ್ಮೋ ಚಿನ್ಮಯೀ ಕಲಾ
ಧರ್ಮೇಣ ಕಲೆಯ ವಿದ್ವಾನ್
ಕಲಾಧರ್ಮೌ ಶಿವಾತ್ಮಕ'

ಕಲೆಗಳಲ್ಲಿ ಪರಿಣಿತನಾದವ ಧರ್ಮಜ್ಞಾನಿಯಾಗಿರಬೇಕು. ಕಲೆಯೂ–ಧರ್ಮವೂ–ಇವರೆಡರ ಸಮ್ಮಿಲನವೂ ಮಂಗಲದಾಯಕವಲ್ಲವೇ

*ಡಾ. ಅಹಲ್ಯಾ ಚಿಂತಾಮಣಿ*


**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com

PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Mar-2016, Vol. No.26, Issue No.6, Price Rs.1/- RNI Regn. No. 53405/91, DL-SW-1/4016/16-18
Printout Date : Mar 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

